ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಜನವರಿ 19, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 247 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999

## ಪರಿಶಿಷ್ಟರ ಒಳಮೀಸಲಾತಿ ವಿಷಯ ಕೇಂದ್ರದ ಮಡಿಲಿಗೆ

### ಸಂವಿಧಾನಕ್ಕೆ ತಿದ್ದುಪಡಿ ತರಲು ಕೇಂದ್ರ, ಸಂಸತ್ತಿಗೆ ಶಿಫಾರಸ್ಸು ಮಾಡಲು ತೀರ್ಮಾನ

ಬೆಂಗಳೂರು, ಜ. 18 - ಪರಿಶಿಷ್ಟರಿಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಹಾಗೂ ಸಂಸತ್ತಿಗೆ ಶಿಫಾರಸ್ಸು ಮಾಡುವ ಮಹತ್ವದ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ಸಭೆ ಇಂದಿಲ್ಲಿ ಕೈಗೊಂಡಿದೆ.

ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸಂವಿಧಾನ ಅನುಚ್ಛೇದ 15 ಮತ್ತು 16ರಂತೆ ಮೀಸಲಾತಿ ಮತ್ತು ಇತರ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವಂತೆ ಇಂದಿಲ್ಲಿ ಸೇರಿದ್ದ ರಾಜ್ಯ ಸಂಪುಟ ತೀರ್ಮಾನಿಸಿದೆ.

ಜನಸಂಖ್ಯೆ ಆಧಾರದ ಮೇಲೆ ವರ್ಗೀಕರಣ ಸೂಕ್ತವೆಂದು ಭಾವಿಸಿರುವ ಸಂಪುಟ, ಭಾರತ ಸಂವಿಧಾನದ ಅನುಚ್ಛೇದ 341ಕ್ಕೆ ಹೊಸದಾಗಿ ಉಪನಿಯಮ (3)ನ್ನು ಸೇರ್ಪಡೆ ಮಾಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲು ಸಭೆ ತೀರ್ಮಾನಿಸಿತು.

ಆ ನಂತರ ಜನಸಂಖ್ಯೆ ಆಧಾರದ ಮೇಲೆ ಪರಿಶಿಷ್ಟ ಸಮುದಾಯದವರಿಗೆ ಒಳ ಮೀಸಲಾತಿ ವರ್ಗೀಕರಣ ಮಾಡಲು ಅವಕಾಶ ದೊರೆಯಲಿದೆ ಎಂದು ನಿರ್ಣಯಿಸಿದೆ.

ಕರ್ನಾಟಕ ಸರ್ಕಾರ ತೆಗೆದುಕೊಂಡಿರುವ ಈ ತೀರ್ಮಾನದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೊಕ್ಕಸದ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ, ಅಲ್ಲದೆ, ವಿವಿಧ ಇಲಾಖೆಗಳೊಂದಿಗೂ ಸಮಾಲೋಚನೆ ಮಾಡುವ ಅಗತ್ಯವಿಲ್ಲ.

ಈ ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಕರ್ನಾಟಕ ಸರ್ಕಾರ ನಿಯಮಗಳು 1977ರ, ಶೆಡ್ಯೂಲ್‌ನ ಅಂಶ 28ರನ್ವಯ ಕೆಲವು ಪ್ರಸ್ತಾವನೆಗಳಿಗೆ ಸಂಪುಟ ಅನುಮೋದನೆ ನೀಡಿದೆ.

ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿಗಳ ಉಪಪಂಗಡಗಳನ್ನು ನಾಲ್ಕು ಗುಂಪುಗಳಾಗಿ ಅವುಗಳ ಜನಸಂಖ್ಯಾ ಆಧಾರದ ಮೇಲೆ ಹಾಗೂ ಅವುಗಳ ಮೀಸಲಾತಿ ಪ್ರಮಾಣದೊಂದಿಗೆ ಉಪವರ್ಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸಂಪುಟ ನಿರ್ಣಯ ಕೈಗೊಂಡಿದೆ.

ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಬೋವಿ, ಬಂಜಾರ, ಕೊರಚ, ಕೊರಮ ಜಾತಿಗಳನ್ನು ಕೈಬಿಡುವ ಪ್ರಸ್ತಾವನೆ ಇಲ್ಲ ಎಂದು ಶಿಫಾರಸ್ಸಿನಲ್ಲಿ ಸ್ಪಷ್ಟಪಡಿಸಲಾಗಿದೆ.


ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಅವಲೋಕಿಸಲು ನ್ಯಾ. ಎ.ಜೆ. ಸದಾಶಿವ ಆಯೋಗವನ್ನು ರಚಿಸಲಾಗಿತ್ತು. ಅದರಂತೆ ಆಯೋಗವು ಪರಿಶಿಷ್ಟರ ಸ್ಥಿತಿಗತಿಗಳ ಬಗ್ಗೆ ಅವಲೋಕಿಸಿದ್ದು, ಸಚಿವ ಸಂಪುಟ ಉಪಸಮಿತಿಯ ಶಿಫಾರಸುಗಳನ್ನು ಸಂಪುಟ ಸಭೆ ಅಂಗೀಕರಿಸಿ, ಕೇಂದ್ರಕ್ಕೆ ಶಿಫಾರಸು ಮಾಡಿದೆ.

ನ್ಯಾ. ಸದಾಶಿವ ಆಯೋಗದ ವರದಿಯನ್ನು ಮುಕ್ತಾಯಗೊಳಿಸುತ್ತಿರುವುದಾಗಿ ಹಿಂದಿನ ಸರ್ಕಾರದ ಸಂಪುಟ ಸಭೆ ಕೈಗೊಂಡಿತ್ತು.

ಎ.ಜೆ.ಸದಾಶಿವ ಆಯೋಗ ನೀಡಿರುವ ವರದಿಯನ್ನು ಸುದೀರ್ಘವಾಗಿ ಪರಿಶೀಲಿಸಿ ಸಂಪುಟದಲ್ಲಿ ಚರ್ಚಿಸಿ, ಪರಿಶಿಷ್ಟ ಸಮಯದಾಯಕ್ಕೆ ಸೇರಿದ ಉಪಪಂಗಡಗಳಿಗೆ ನ್ಯಾಯ ದೊರೆಕಿಸುವ ಹೊಣೆಗಾರಿಕೆಯನ್ನು ಕೇಂದ್ರದ ಹೆಗಲಿಗೆ ಹಾಕಿದೆ. (4ನೇ ಪುಟಕ್ಕೆ)

## ಕರ್ನಾಟಕದ ಸಾಂಸ್ಕೃತಿಕ ನಾಯಕರಾಗಿ ಬಸವಣ್ಣ

### ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ



ಬೆಂಗಳೂರು, ಜ. 18 - ಕರ್ನಾಟಕದ ಸಾಂಸ್ಕೃತಿಕ ನಾಯಕನನ್ನಾಗಿ ಬಸವಣ್ಣ ಅವರ ಹೆಸರನ್ನು ಘೋಷಣೆ ಮಾಡಲು ರಾಜ್ಯ ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಇಂದಿನ ಕಲುಷಿತ ವಾತಾವರಣದಲ್ಲಿ ಬಸವಣ್ಣ ಅವರ ತತ್ವ ಆದರ್ಶ ಎಲ್ಲಡೆ ಪಸರಿಸಬೇಕು. ಇದಕ್ಕೆ ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ನೀಡಲು ಸಂಪುಟ ಸಭೆ ನಿರ್ಧರಿಸಿದೆ ಎಂದರು.

ಮುಂದಿನ ವರ್ಷ ಅನುಭವ ಮಂಟಪದ ಲೋಕಾರ್ಪಣೆ ಮಾಡಲು ಸಭೆ ತೀರ್ಮಾನಿಸಿದ್ದು, ಮಂಟಪದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟವರಿಗೆ ಸೂಚಿಸಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಸಂಪುಟ ಸಭೆ ಬಳಿಕ ಎಕ್ಸ್ ನಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರು, ಇಂದು ಸಾಮಾಜಿಕ ನ್ಯಾಯದ ಮೊದಲ ಹರಿಕಾರ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ಇಂದು ನನ್ನ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ತೀರ್ಮಾನಿಸಿದೆ ಎಂದು ತಿಳಿಸಿದ್ದಾರೆ.

ನಮ್ಮ ಸರ್ಕಾರದ ಈ ತೀರ್ಮಾನ ಮುಖ್ಯಮಂತ್ರಿಯಾದ ನನಗೆ ಅತೀವ ಹೆಮ್ಮೆ ಮತ್ತು ತೃಪ್ತಿಯನ್ನು ಉಂಟುಮಾಡಿದೆ. ಇದು ಕೇವಲ ಘೋಷಣೆ ಅಲ್ಲ, ಬಸವ ತತ್ವದ ಮೇಲಿರುವ ನಮ್ಮ ನಂಬಿಕೆ ಮತ್ತು ಬದ್ದತೆ.

ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಬೇಕೆಂದು ನಾಡಿನ ಲಿಂಗಾಯತ ಮಠಗಳ ಸ್ವಾಮಿಗಳು ನನ್ನ ಬಳಿ ಬಂದು ಮನವಿ ಮಾಡಿದ್ದರು. ಇದು ವೈಯಕ್ತಿಕವಾಗಿ ನನ್ನ (4ನೇ ಪುಟಕ್ಕೆ)

### ವೀರಶೈವ ಮಹಾಸಭಾ ಅಭಿನಂದನೆ



ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮನವಿಯನ್ನು ಪರಿಗಣಿಸಿ ಮುಖ್ಯಮಂತ್ರಿಗಳು ಇಂದು ನಡೆದ ಸಚಿವ ಸಂಪುಟದಲ್ಲಿ ಜಗಜ್ಯೋತಿ ಬಸವಣ್ಣನವರನ್ನು ಕರ್ನಾಟಕ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದಕ್ಕೆ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ ಅಭಿನಂದಿಸಿದೆ.
ಕಳೆದ ಡಿ.23-24ರಂದು ದಾವಣಗೆರೆಯಲ್ಲಿ ನಡೆದ 24ನೇ ಮಹಾ ಅಧಿವೇಶನದಲ್ಲಿ 8 ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅದರಲ್ಲಿ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕತಿಕ ನಾಯಕ ಎಂದು ಘೋಷಿಸಬೇಕೆಂಬುದು ಪ್ರಮುಖ ನಿರ್ಣಯವಾಗಿತ್ತು. ಅದರಂತೆ ಮುಖ್ಯಮಂತ್ರಿಗಳಿಗೆ ಮನವಿಯನ್ನೂ ಸಲ್ಲಿಸಲಾಗಿತ್ತು.
ಇದೀಗ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿಗಳಿಗೆ ಮಹಾಸಭಾದ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ, ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ ಅಭಿನಂದಿಸಿದ್ದಾರೆ.

### ತರಳಬಾಳು ಶ್ರೀ ಸಂತಸ



ಬೆಂಗಳೂರು, ಜ.18- ಸರ್ಕಾರವು ಶರಣ ಪರಂಪರೆಯ ಕರಣಧಾ ರತ್ವದ ದಿವ್ಯ ದಾರ್ಶನಿಕ, ವಿಶ್ವಗುರು ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರ ನ್ನಾಗಿ ಗುರುವಾರ ಘೋಷಿಸಿದ್ದು ಖುಷಿಯ ವಿಚಾರ ಎಂದು ಸಿರಿಗೆರೆ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದ್ದಾರೆ. 'ಭಾರತದ ಸಂವಿಧಾನದ ಪ್ರಸ್ತುತ ಎತ್ತಿಹಿಡಿದಿರುವ ಜಾತಿಭೇದವಿಲ್ಲದ, ವರ್ಗ ತಾರತಮ್ಯವಿಲ್ಲದ, ಲಿಂಗ ತಾರ ತಮ್ಯವಿಲ್ಲದ ಸಮಾಜವನ್ನು ರೂಪಿಸುವ ಕೆಲಸ ಬಸವಣ್ಣನವರ ನೇತೃತ್ವದಲ್ಲಿ ನಡೆಯಿತು' ಎಂದು ಸರ್ಕಾರವು ಪ್ರತಿಪಾದಿಸಿದೆ ಎಂದು ತಿಳಿಸಿದ್ದಾರೆ.

### ಪ್ರಾಣ ಪ್ರತಿಷ್ಠಾಪನೆ : ಕೇಂದ್ರ ನೌಕರರಿಗೆ ಅರ್ಧ ದಿನ ರಜೆ

ನವದೆಹಲಿ, ಜ. 18 – ರಾಮ ಜನ್ಮಭೂಮಿ ದೇವಾಲಯದ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಜನವರಿ 22ರಂದು ದೇಶಾದ್ಯಂತ ಇರುವ ಕೇಂದ್ರ ಸರ್ಕಾರದ ಕಚೇರಿಗಳಿಗೆ ಅರ್ಧ ದಿನ ರಜೆ ಘೋಷಿಸಲಾಗಿದೆ.

ನೌಕರರು ಪ್ರಾಣ ಪ್ರತಿಷ್ಠಾಪನೆಯ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಮಧ್ಯಾಹ್ನ 2.30ರವರೆಗೆ ರಜೆ ಘೋಷಿಸಿರುವುದಾಗಿ ಕೇಂದ್ರ ಸಿಬ್ಬಂದಿ ಸಚಿವಾಲಯ ತಿಳಿಸಿದೆ.

### ಆಕಾಶ ಏರ್‌ನಿಂದ 150 ವಿಮಾನಗಳ ಖರೀದಿ

ನವದೆಹಲಿ, ಜ. 18 – ಆಕಾಶ ಏರ್ ವಿಮಾನಯಾನ ಸಂಸ್ಥೆಯ 150 ವಿಮಾನಗಳ ಖರೀದಿಗೆ ಮುಂದಾಗಿದೆ. ಕಳೆದ ಒಂದು ವರ್ಷದಲ್ಲಿ ಮೂರು ವಿಮಾನಯಾನ ಸಂಸ್ಥೆಗಳು ಒಟ್ಟಾರೆ 1,120 ವಿಮಾನಗಳ ಖರೀದಿಗೆ ಮುಂದಾಗಿವೆ.

ಬೋಯಿಂಗ್ 737 ಮ್ಯಾಕ್ಸ್ ವಿಮಾನಗಳನ್ನು ಖರೀದಿಸಲು ಆಕಾಶ ಏರ್ ನಿರ್ಧರಿಸಿದೆ. ಇದಕ್ಕೂ ಮುಂಚೆ ಏರ್ ಇಂಡಿಯಾ ಹಾಗೂ ಇಂಡಿಗೋ ಕಂಪನಿಗಳು ಒಟ್ಟಾರೆ 970 ವಿಮಾನಗಳ ಖರೀದಿಯ ಘೋಷಣೆ ಮಾಡಿದ್ದವು.

ಮುಂಬರುವ ಕೆಲ ವರ್ಷಗಳಲ್ಲಿ ಭಾರತೀಯ ವಿಮಾನಯಾನ ಸಂಸ್ಥೆಗಳು 1,600ಕ್ಕೂ ಹೆಚ್ಚು ವಿಮಾನಗಳನ್ನು ಪಡೆಯಲಿವೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ. ಪ್ರಸಕ್ತ ಭಾರತೀಯ ವಿಮಾನಯಾನ ಸಂಸ್ಥೆಗಳು 730 ವಿಮಾನಗಳನ್ನು ಹೊಂದಿವೆ.

### ಘಟಿಕೋತ್ಸವಕ್ಕೆ ಕೈ ಮಗ್ಗದ ಉಡುಗೆ: ಯುಜಿಸಿ ಸೂಚನೆ

ನವದೆಹಲಿ, ಜ. 18 – ಘಟಿಕೋತ್ಸವ ರೀತಿಯ ವಿಶೇಷ ಕಾರ್ಯಕ್ರಮಗಳಿಗೆ ಕೈಮಗ್ಗದಿಂದ ರೂಪಿಸಲಾದ ಉಡುಗೆಗಳನ್ನು ಬಳಸುವಂತೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ.) ಮತ್ತೊಮ್ಮೆ ಸೂಚನೆ ನೀಡಿದೆ.

ಈ ಬಗ್ಗೆ 2015 ಹಾಗೂ 2019ರಲ್ಲಿ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಲಾಗಿತ್ತು. ಕೈಮಗ್ಗದಿಂದ ರೂಪಿಸಲಾದ ಉಡುಗೆಗಳು ಭಾರತದ ಹವಾಮಾನಕ್ಕೆ ಸೂಕ್ತವಾಗಿವೆ ಹಾಗೂ ಇವುಗಳಿಂದ ಹೆಮ್ಮೆಯ ಭಾವನೆ ಬರುತ್ತದೆ ಎಂದು ಯು.ಜಿ.ಸಿ. ಹೇಳಿದೆ. ಹಲವು ವಿಶ್ವವಿದ್ಯಾಲಯಗಳು (2ನೇ ಪುಟಕ್ಕೆ)

## ದಾವಣಗೆರೆಗೆ ಇದೆ ಬೆಣ್ಣೆ ದೋಸೆ 'ಹಕ್ಕು'



ದಾವಣಗೆರೆ, ಜ. 18 - ಪಶ್ಮಿನಾ ಬಟ್ಟೆಗೆ ಕಾಶ್ಮೀರ, ಟೀಗೆ ಡಾರ್ಜಲಿಂಗ್ ಹಾಗೂ ಅಲ್ಫೋನ್ಸೋ ಮಾವಿನ ಹಣ್ಣಿಗೆ ರತ್ನಗಿರಿಯು ಭೌಗೋಳಿಕ ಸೂಚಕ (ಜಿ.ಐ.) ಹಕ್ಕು ಪಡೆದುಕೊಂಡಿದೆ. ಅದೇ ರೀತಿ ದಾವಣಗೆರೆಯೂ ಬೆಣ್ಣೆ ದೋಸೆಗೆ ಜಿ.ಐ. ಪಡೆಯಬೇಕಿದೆ ಎಂದು ಡಬ್ಲ್ಯೂ.ಐ.ಪಿ.ಒ. ಸಲಹೆಗಾರರಾದ ಡಾ. ಸರಸಿಜಾ ಪದ್ಮನಾಭನ್ ಸಲಹೆ ನೀಡಿದ್ದಾರೆ.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ ಬೆಂಗಳೂರಿನ ಎಂ.ಎಸ್.ಎಂ.ಇ. ಸೆಂಟರ್ ಆಫ್ ಎಕ್ಸಲೆನ್ಸ್ - ಐ.ಐ.ಎಸ್.ಸಿ. ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ ಸಂಶೋಧನಾ ವಿಧಾನ ಹಾಗೂ ಬೌದ್ಧಿಕ ಹಕ್ಕುಸ್ವಾಮ್ಯ ಕುರಿತ ಕಾರ್ಯಾಗಾರದ ಮೂರನೇ ದಿನ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಚೆನ್ನೈನಲ್ಲಿ ತಯಾರಿಸುವ ದೋಸೆಗೆ ದಾವಣಗೆರೆ ಬೆಣ್ಣೆದೋಸೆ ಎಂದು ಕರೆಯಲು ಸಾಧ್ಯವಾಗದು. ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ವಿಶೇಷವಾಗಿ ದೊರೆಯುವ ಆಹಾರ ಪದಾರ್ಥಗಳನ್ನು ವಿಶಿಷ್ಟವಾಗಿ ಪರಿಗಣಿಸ ಬೇಕಾಗುತ್ತದೆ. ಇಂತಹ ಉತ್ಪನ್ನಗಳಿಗೆ ಭೌಗೋಳಿಕ ಸೂಚಕಗಳನ್ನು ಪಡೆದರೆ ಬೇರೆಯವರು ನಕಲು ಮಾಡುವುದನ್ನು ತಡೆಯಬಹುದು ಎಂದರು.

ಬೌದ್ಧಿಕ ಹಕ್ಕುಗಳನ್ನು ಹಲವಾರು ಶಾಸನಗಳು ಮತ್ತು ಅಂತರರಾಷ್ಟ್ರೀಯ ಒಪ್ಪಂದ ಮೂಲಕ ರಕ್ಷಿಸಲಾಗಿದೆ. ಈ ಹಕ್ಕುಗಳು ಬೆಳವಣಿಗೆಗೆ ನೆರವಾಗುತ್ತವೆ. ಭಾರತ 2015ರಲ್ಲಿ ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ 81ನೇ ಸ್ಥಾನದಲ್ಲಿತ್ತು. 2022ರಲ್ಲಿ 40ನೇ ಸ್ಥಾನಕ್ಕೆ ಬಂದಿದೆ. ಭಾರತ ಈಗ ಆವಿಷ್ಕಾರ ವಲಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶವಾಗಿದೆ ಎಂದು ಸರಸಿಜಾ ತಿಳಿಸಿದರು.

ಯಾವುದೇ ಉತ್ಪನ್ನವನ್ನು ಇಲ್ಲವೇ ಉತ್ಪಾದನೆಯ ಪ್ರಕ್ರಿಯೆಯನ್ನು ಆವಿಷ್ಕರಿಸಿದಾಗ ಅದಕ್ಕಾಗಿ ಹಕ್ಕುಸ್ವಾಮ್ಯ ಪಡೆಯಬಹುದು. ಇಂತಹ ಆವಿಷ್ಕಾರಗಳು ವಿನೂತನ, ವಿಭಿನ್ನ ಹಾಗೂ ವಾಣಿಜ್ಯವಾಗಿ ಉಪಯುಕ್ತವಾಗಿರಬೇಕು. ಸಮಾಜಕ್ಕೆ ಹಾನಿ ತರುವ ಇಲ್ಲವೇ ಕ್ಷುಲ್ಲಕ ರೀತಿಯ ಉತ್ಪನ್ನಗಳಿಗೆ ಹಕ್ಕುಸ್ವಾಮ್ಯ ಪಡೆಯಲು (2ನೇ ಪುಟಕ್ಕೆ)

### 16 ವರ್ಷದೊಳಗಿನವರಿಗೆ ಕೋಚಿಂಗ್ ಪ್ರವೇಶವಿಲ್ಲ

**ಕೇಂದ್ರದ ಮಾರ್ಗಸೂಚಿ**

ನವದೆಹಲಿ, ಜ. 18 – ಕೋಚಿಂಗ್ ಸೆಂಟರ್‌ಗಳು 16 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ದಾಖಲಾತಿ ನೀಡುವಂತಿಲ್ಲ. ದಾರಿ ತಪ್ಪಿಸುವ ಭರವಸೆ ನೀಡಬಾರದು, ಶ್ರೇಯಾಂಕ ಇಲ್ಲವೇ ಉತ್ತಮ ಅಂಕಗಳ ಗ್ಯಾರಂಟಿ ನೀಡಬಾರದು ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿದೆ.

ಖಾಸಗಿ ಕೋಚಿಂಗ್ ಸೆಂಟರ್‌ಗಳ ಅನಿರ್ಬಂಧಿತ ಬೆಳವಣಿಗೆ ತಡೆಯಲು ಮಾರ್ಗಸೂಚಿ ರೂಪಿಸಲಾಗಿದೆ. ಕೋಚಿಂಗ್ ಕೇಂದ್ರಗಳಲ್ಲಿ ಸೌಲಭ್ಯಗಳ ಕೊರತೆ, ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಮಾಣ ಹೆಚ್ಚಳ ಹಾಗೂ ಕೆಲ ಸಂಸ್ಥೆಗಳ ಬೋಧನ ಮಾದರಿಗಳ ಬಗ್ಗೆ ದೂರುಗಳು ಬಂದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಯಾವುದೇ ಕೋಚಿಂಗ್ ಕೇಂದ್ರ ಪದವಿಗಿಂತ ಕಡಿಮೆ ವಿದ್ಯಾರ್ಹತೆಯವರನ್ನು ಬೋಧನೆಗೆ ನೇಮಿಸಿಕೊಳ್ಳುವಂತಿಲ್ಲ. ಹತ್ತನೇ ತರಗತಿಯ ನಂತರವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ಎಂದು ತಿಳಿಸಲಾಗಿದೆ.

### ಗೃಹ ಜ್ಯೋತಿ : ಶೇಕಡದ ಬದಲು 10 ಯುನಿಟ್ ಹೆಚ್ಚುವರಿ ವಿದ್ಯುತ್



ಬೆಂಗಳೂರು, ಜ. 18 – ಗೃಹ ಜ್ಯೋತಿ ಯೋಜನೆಯಲ್ಲಿ ಬದಲಾವಣೆ ತಂದಿರುವ ರಾಜ್ಯ ಸರ್ಕಾರ, ಹೆಚ್ಚುವರಿ ಉಚಿತ ವಿದ್ಯುತ್ ಬಳಕೆಯ ಪ್ರಮಾಣವನ್ನು ಶೇಕಡಾವಾರಿನ ಬದಲು ಯುನಿಟ್ ಮಾದರಿಯಲ್ಲಿ ನೀಡಲು ನಿರ್ಧರಿಸಿದೆ.

ಸಂಪುಟ ಸಭೆಯ ನಂತರ ಈ ವಿಷಯ ತಿಳಿಸಿರುವ ಕಾನೂನು ಸಚಿವ ಹೆಚ್.ಕೆ. ಪಾಟೀಲ್, ವಾರ್ಷಿಕ ವಿದ್ಯುತ್ ಬಳಕೆಯ ಸರಾಸರಿಗಿಂತ ಶೇ.10ರಷ್ಟು ಹೆಚ್ಚಿನ ವಿದ್ಯುತ್ ಬಳಸಿದವರಿಗೆ ಶೂನ್ಯ ಬಿಲ್ ಬರುತ್ತಿತ್ತು. ಇನ್ನು ಮುಂದೆ ಬಳಕೆ ಎಷ್ಟೇ ಇದ್ದರೂ ಸಹ, ಒಟ್ಟಾರೆ 10 ಯುನಿಟ್ ಹೆಚ್ಚು ವಿದ್ಯುತ್ ನೀಡಲಾಗುವುದು ಎಂದರು.

ಈ ಬಗ್ಗೆ ಮಾತನಾಡಿರುವ ಇಂಧನ ಸಚಿವ ಕೆ.ಜೆ. ಜಾರ್ಜ್, ಸರ್ಕಾರದ ಈ ಕ್ರಮದಿಂದ ಬಡವರಿಗೆ ಅನುಕೂಲವಾಗಲಿದೆ ಎಂದರು.

ಈ ಹಿಂದಿನ ಪದ್ಧತಿಯಲ್ಲಿ 48 ಯುನಿಟ್ ವಿದ್ಯುತ್ ಬಳಸುವವರಿಗೆ ಹೆಚ್ಚುವರಿಯಾಗಿ 4-5 ಯುನಿಟ್ ವಿದ್ಯುತ್ ಮಾತ್ರ ಸಿಗುತ್ತಿತ್ತು. ಸರ್ಕಾರದ ಹೊಸ ನಿರ್ಧಾರದಿಂದ ಅವರಿಗೆ 10 ಯುನಿಟ್ ಹೆಚ್ಚುವರಿ ವಿದ್ಯುತ್ ಸಿಗಲಿದೆ. ಮುಂದಿನ ಬಿಲ್ಲಿಂಗ್‌ನಿಂದ ಈ ಬದಲಾವಣೆ ಜಾರಿಗೆ ಬರಲಿದೆ. ಸರ್ಕಾರದ ಕ್ರಮದಿಂದ ವಾರ್ಷಿಕವಾಗಿ 500-600 ಕೋಟಿ ರೂ. ಹೊರೆ ಆಗಲಿದೆ ಎಂದು ಜಾರ್ಜ್ ಹೇಳಿದರು.

## ಕುಲಾಂತರಿ ಬೆಳೆಗಳಿಂದ ಆಹಾರ ಸುರಕ್ಷತೆ

### ವಿಶ್ವದ ಶೇ.80ರಷ್ಟು ಸೋಯಾಬೀನ್ ಕುಲಾಂತರಿ : ಕೇಂದ್ರ ಸರ್ಕಾರ

ನವದೆಹಲಿ, ಜ. 18 – ಕುಲಾಂತರಿ ಬೆಳೆಗಳಿಂದ ಆಹಾರ ಸುರಕ್ಷತೆ ಹೆಚ್ಚಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವ ಕೇಂದ್ರ ಸರ್ಕಾರ, ಭಾರತ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಕುಲಾಂತರಿ ಖಾದ್ಯ ತೈಲವನ್ನು ಆಮದು ಮಾಡಿಕೊಂಡು ಬಳಸುತ್ತಿದೆ. ಹೀಗಾಗಿ ಕುಲಾಂತರಿ ಬೆಳೆಗಳ ಕುರಿತ ಕಳವಳಕ್ಕೆ ಆಧಾರವಿಲ್ಲ ಎಂದು ಹೇಳಿದೆ.

ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ದೇಶಕ್ಕೆ ಅಗತ್ಯವಿರುವ ಖಾದ್ಯ ತೈಲದಲ್ಲಿ ಶೇ.55-60ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದಿದ್ದಾರೆ.

ಭಾರತೀಯ ಕೃಷಿ ವಲಯದಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ಎದುರಿಸಲು ಹೊಸ ಜೈವಿಕ ತಂತ್ರಜ್ಞಾನದ ಬಳಕೆಯಾಗಬೇಕಿದೆ. ಇದರಿಂದ ಆಹಾರ ಸುರಕ್ಷತೆ ಹೆಚ್ಚಾಗುವ ಜೊತೆಗೆ, ವಿದೇಶಿ ಅವಲಂಬನೆ ಕಡಿಮೆಯಾಗುತ್ತದೆ ಎಂದು ಮೆಹ್ತ ಹೇಳಿದ್ದಾರೆ.

2020-21ರಲ್ಲಿ ಭಾರತಕ್ಕೆ 24.6 ದಶಲಕ್ಷ ಟನ್ ಖಾದ್ಯ ತೈಲದ ಅಗತ್ಯವಿತ್ತು. ದೇಶೀಯವಾಗಿ 11.1 ದಶಲಕ್ಷ ಟನ್ ಉತ್ಪಾದನೆಯಾಗಿತ್ತು. ಆ ವರ್ಷ 1.15 ಲಕ್ಷ ಕೋಟಿ ರೂ.ಗಳ ಖಾದ್ಯ ತೈಲ ಆಮದು ಮಾಡಿಕೊಳ್ಳಲಾಗಿತ್ತು ಎಂದು ಮೆಹ್ತ ಹೇಳಿದರು.

ಭಾರತ ಈಗ ದೊಡ್ಡ ಪ್ರಮಾಣದಲ್ಲಿ ಕುಲಾಂತರಿ ಬೀಜಗಳಿಂದ ಉತ್ಪಾದಿಸಲಾದ ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. (4ನೇ ಪುಟಕ್ಕೆ)

## ಅಂಟಿರದ, ದಂಟು ಕಡಿಮೆಯ ಹಲಸು

### ತರಳಬಾಳು ಕೃಷಿ ವಿಜ್ಞಾನದಲ್ಲಿ 'ಫಲ' ನೀಡುತ್ತಿರುವ ಪ್ರಯೋಗ



ದಾವಣಗೆರೆ, ಜ. 18 – ಯಾವುದಾದರೂ ವಿಷಯ ಸಲೀಸಾಗುವಂತಿದ್ದರೆ ಅದನ್ನು ಸುಲಿದ ಬಾಳೆ ಹಣ್ಣಿನಂತೆ ಎಂದು ಹೇಳುತ್ತಾರೆ. ಅದೇ ರೀತಿ ಯಾವುದಾದರೂ ವಿಷಯ ಗೋಜಲಿನದಾಗಿದ್ದರೆ ಅದನ್ನು ಹಲಸು ಸುಲಿಯುವಂದದಿ ಎಂದು ಹೇಳಬಹುದೇನೋ? ಏಕೆಂದರೆ ಹಲಸು ಸುಲಿಯುವಷ್ಟರಲ್ಲಿ ಸುಸ್ತಾಗುವವರೇ ಹೆಚ್ಚು.

ಅಂಟಿಲ್ಲದೇ ಸುಲಿಯಲು ಸುಲಭವಾಗಿರುವ, ದಂಟು ಹೆಚ್ಚಾಗಿರದ, ರುಚಿಕರವಾಗಿರುವ ಹಲಸಿದ್ದರೆ ಎಷ್ಟು ಚಂದ ಅಲ್ಲವೇ? ಇದೇ ವಿಚಾರ ನಗರದ ಐ.ಸಿ.ಎ.ಆರ್. - ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ. ಎನ್. ದೇವರಾಜ್ ಅವರ ಮನಸ್ಸಿಗೆ ಬಂದು, ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಲವು ಹಲಸಿನ ತಳಿಗಳ ಪ್ರಯೋಗ ನಡೆಸಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಹಲವಾರು ಜಾತಿಗಳ ಹಲಸಿನ ಸಸಿಗಳನ್ನು ಬೆಳೆಸುತ್ತಿದ್ದೇವೆ. ಈಗ ಕೆಲವು ಫಲ ನೀಡಲು ಆರಂಭಿಸಿವೆ. ಉತ್ಸಾಹ ತರುವ ರೀತಿಯಲ್ಲಿ ಫಲಿತಾಂಶ ದೊರೆಯುತ್ತಿದೆ ಎಂದವರು ಹೇಳಿದ್ದಾರೆ.

ಹಲಸು ನಮ್ಮ ಭಾಗಕ್ಕೆ ಉಪಯುಕ್ತವಾಗುವ ಬೆಳೆಯಾಗಿದೆ. ಇದನ್ನು ಬೆಳೆಯುವುದೂ ಸುಲಭ, ಕೀಟ ಬಾಧೆಯೂ ಕಡಿಮೆ, ಇಳುವರಿಯೂ ಹೆಚ್ಚು. ಅಲ್ಲದೇ, ಹಲಸಿನಲ್ಲಿ ಅಪಾರ ಪೌಷ್ಠಿಕಾಂಶಗಳಿವೆ. ನಾನಾ ರೀತಿಯ ಉತ್ಪನ್ನಗಳನ್ನು ಪಡೆಯಬಹುದಾಗಿದೆ ಎಂದವರು ವಿವರಿಸಿದ್ದಾರೆ.

ಸಾಮಾನ್ಯ ಹಲಸಿನಲ್ಲಿ ಅಂಟು ಹಾಗೂ ದಂಟು ಎರಡೂ ಹೆಚ್ಚಾಗಿರುತ್ತದೆ. ಅಂಟಿನ ಪ್ರಮಾಣ ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನಬಹುದಾದ ರೀತಿಯ ಹಲವಾರು ತಳಿಗಳನ್ನು ನಮ್ಮ ಕೇಂದ್ರದಲ್ಲಿ ಬೆಳೆದಿದ್ದೇವೆ. ಇವುಗಳಲ್ಲಿ ಕೆಲವು ಅಕ್ಟೋಬರ್ - ನವೆಂಬರ್‌ನಲ್ಲೇ ಹೂವು ಬಿಟ್ಟು, ಜನವರಿಯಲ್ಲೇ ರುಚಿಕರ ಹಣ್ಣಾಗಿವೆ ಎಂದು ಹೇಳಿದರು.

ಸಾಮಾನ್ಯವಾಗಿ ಏಪ್ರಿಲ್ ತಿಂಗಳ ನಂತರವೇ ಹಲಸಿನ ಹಣ್ಣು ಲಭ್ಯವಾಗುತ್ತದೆ. ನಾವು ಕೇಂದ್ರದಲ್ಲಿ (4ನೇ ಪುಟಕ್ಕೆ)

### ದೆಹಲಿ ಪರೇಡ್‌ಗೆ 1,500 ರೈತ ದಂಪತಿಗೆ ಆಹ್ವಾನ

ನವದೆಹಲಿ, ಜ. 18 – ರಾಜಧಾನಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ದಿನದ ಪರೇಡ್ ವೀಕ್ಷಿಸಲು ಇದೇ ಮೊದಲ ಬಾರಿಗೆ 1,500 ರೈತ ದಂಪತಿಗಳಿಗೆ ಆಹ್ವಾನ ನೀಡಲಾಗಿದೆ. ಇದೇ ಮೊದಲ ಬಾರಿಗೆ ರೈತ ದಂಪತಿಯನ್ನು ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗಿದೆ ಎಂದು ಕೃಷಿ ಸಚಿವಾಲಯದ ಹಿರಿಯ ಅಧಿಕಾರಿಗಳು ಹೇಳಿದ್ದಾರೆ. ಪರೇಡ್ ನಂತರ ಕೃಷಿ ಸಚಿವ ಅರ್ಜುನ್ ಮುಂಡ ಅವರು ರೈತರಿಗೆ ಭೋಜನ ಕೂಟ ಆಯೋಜಿಸಿದ್ದಾರೆ. ಕಳೆದ ವರ್ಷ 500 ರೈತರಿಗೆ ವಿಶೇಷ ಅತಿಥಿಗಳಾಗಿ ಆಹ್ವಾನ ನೀಡಲಾಗಿತ್ತು.

### ವಿದ್ಯುತ್ ಘಟಕಗಳಿಗೆ 5,607 ಕೋಟಿ ರೂ. ಹೂಡಿಕೆ ಮಾಡಲು ಸಮ್ಮತಿ

ನವದೆಹಲಿ, ಜ. 18 – ಸರ್ಕಾರಿ ಸ್ವಾಮ್ಯದ ಎರಡು ಕಂಪನಿಗಳು ವಿದ್ಯುತ್ ಘಟಕಗಳ ಯೋಜನೆಗಳಲ್ಲಿ 5,607 ಕೋಟಿ ರೂ. ಹೂಡಿಕೆ ಮಾಡಲು ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಒಪ್ಪಿಗೆ ನೀಡಿದೆ. ಸೌತ್ ಈಸ್ಟರ್ನ್ ಕೋಲ್‌ಫೀಲ್ಡ್ಸ್ ಮತ್ತು ಮಹಾನದಿ ಕೋಲ್‌ಫೀಲ್ಡ್ಸ್‌ಗಳು ಎರಡು ಶಾಖೋತ್ಪನ್ನ ವಿದ್ಯುತ್ ಯೋಜನೆಗಳಲ್ಲಿ ಹೂಡಿಕೆ ಮಾಡಲಿವೆ. ಇವುಗಳ ಒಟ್ಟು ಸಾಮರ್ಥ್ಯ 2,260 ಮೆಗಾವ್ಯಾಟ್ ಆಗಿದೆ.

ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಜಿಲ್ಲಾ ಬಿಜೆಪಿ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ನಮ್ಮ
ಶ್ರೀ ಎನ್. ರಾಜಶೇಖರ್
(ರಾಜಣ್ಣ)
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



ಶುಭ ಕೋರುವವರು :
- ತಾಯಿ : ಶ್ರೀಮತಿ ಕಮಲಮ್ಮ ನಾಗಪ್ಪ
- ಶ್ರೀ ಪೈಲ್ವಾನ್ ಬಸವರಾಜಪ್ಪ, ದಾವಣಗೆರೆ.
- ಶ್ರೀಮತಿ ಗೀತಾ ಬಸವರಾಜ್, ಬೀಜ ನಿಗಮ, ಮೋರಿಗೇರಿ.
- ಶ್ರೀಮತಿ ಸೀಮಾ ನಾಗರಾಜ್, ಶಿಕ್ಷಕರು, ಅಳಿ ಗೆಂಚಿಕೆರೆ.
- ಶ್ರೀಮತಿ ವೀಣಾ ಅನಿಲ್ ಕುಮಾರ್, ಎಸ್.ಕೆ.ಬಿ. ಆಲೂರ್ ಮೆಡಿಕಲ್ಸ್, ದಾವಣಗೆರೆ.
- ಶ್ರೀಮತಿ ಕವಿತಾ ವಿಜಯ್‌ಕುಮಾರ್, ಧನ್ವಂತರಿ ಪೆಟ್ ಶಾಪ್.
- ಶ್ರೀಮತಿ ಮೀನಾಕ್ಷಿ ಪರಮೇಶ್ವರಪ್ಪ ಎಕ್ಸ್ ಆರ್ಮಿ, ಡಿಸಿಸಿ ಬ್ಯಾಂಕ್.
- ಅಲೋಕ್ ಎನ್.ವಿ.,
- ಲಿಂಗದ ಕಲ್ಲುಗುಡಿ ದಿ.ಪೈಲ್ವಾನ್ ಚೆನ್ನಬಸಪ್ಪನವರ ಕುಟುಂಬ ವರ್ಗ

# ದಾವಣಗೆರೆಗೆ ಇದೆ ಬೆಣ್ಣೆ ದೋಸೆ 'ಹಕ್ಕು'

## ಗಾಜಿಗಾಗಿ ದ್ವೀಪಬಂಧಿ

ವೆನಿಸ್ ಐಷಾರಾಮಿ ಗಾಜಿನ ಉತ್ಪನ್ನಗಳಿಗೆ ಸಾವಿರಾರು ವರ್ಷಗಳಿಂದ ಪ್ರಸಿದ್ಧವಾಗಿದೆ. ಈ ಗಾಜಿನ ಉತ್ಪನ್ನಗಳನ್ನು ವಿಶಿಷ್ಟವಾಗಿ ರೂಪಿಸಲಾಗುತ್ತದೆ. ಈ ವಿಧಾನವನ್ನು ಸಂರಕ್ಷಿಸಲು ಕಾರ್ಮಿಕರನ್ನು ವೆನಿಸ್ ಸಮೀಪದ ಮುರಾನೋ ದ್ವೀಪದಲ್ಲಿ ನಿರ್ಬಂಧಿಸಲಾಗುತ್ತಿತ್ತು ಎಂದು ಸರಸಿಜಾ ಪದ್ಮನಾಭನ್ ತಿಳಿಸಿದರು. 13ನೇ ಶತಮಾನದಲ್ಲಿ ವೆನಿಸ್ ಗಾಜಿನ ಎಲ್ಲ ಉತ್ಪಾದನಾ ಘಟಕಗಳನ್ನು ಮುರಾನೊ ದ್ವೀಪಕ್ಕೆ ವರ್ಗಾಯಿಸಲಾಯಿತು. ಕಾರ್ಮಿಕರು ಅನುಮತಿ ಇಲ್ಲದೇ ಹೊರ ಹೋಗುವಂತಿರಲಿಲ್ಲ. ಈ ರೀತಿ ವೆನಿಸ್ ಗಾಜು ಉತ್ಪಾದನೆಯ ಗುಟ್ಟುಗಳನ್ನು ರಟ್ಟಾಗದಂತೆ ತಡೆಯಲಾಗಿತ್ತು ಎಂದರು.

## 2,500 ವರ್ಷಗಳ ಹಿಂದೆ ಮೊದಲ ಹಕ್ಕುಸ್ವಾಮ್ಯ

ಹಕ್ಕುಸ್ವಾಮ್ಯದ ಪರಿಕಲ್ಪನೆ 2,500 ವರ್ಷಗಳ ಹಿಂದೆಯೇ ಮೂಡಿ ಬಂದಿತ್ತು. ಗ್ರೀಕ್ ವಸಹಾತುವಾಗಿದ್ದ ಸೈಬಾರಿಸ್‌ನಲ್ಲಿ ಮೊದಲ ಬೌದ್ಧಿಕ ಹಕ್ಕು ಪರಿಕಲ್ಪನೆಯನ್ನು ಗುರುತಿಸಲಾಗಿದೆ ಎಂದು ಸರಸಿಜಾ ಪದ್ಮನಾಭನ್ ಹೇಳಿದರು. ಸೈಬಾರಿಸ್‌ನಲ್ಲಿ ಅಡುಗೆ ಭಟ್ಟರು ಹೊಸ ತಿನಿಸು ಕಂಡು ಹಿಡಿದಾಗ, ಒಂದು ವರ್ಷದವರೆಗೆ ಅವರು ಹಕ್ಕು ಹೊಂದಿರುತ್ತಿದ್ದರು ಎಂದವರು ತಿಳಿಸಿದರು.

**(1ನೇ ಪುಟದಿಂದ)** ಕಾಯ್ದೆಯಲ್ಲಿ ಅವಕಾಶವಿಲ್ಲ ಎಂದರು.

ವ್ಯಾಪಾರಿ ಗುರುತುಗಳು, ವಿನ್ಯಾಸಗಳು, ಭೌಗೋಳಿಕ ಸೂಚಕ, ವಿನೂತನ ಸಸ್ಯ ತಳಿಗಳು, ಸೆಮಿಕಂಡಕ್ಟರ್ ವಿನ್ಯಾಸ ಹೀಗೆ ಹಲವು ರೀತಿಯ ಆವಿಷ್ಕಾರಗಳಿಗೆ ಹಕ್ಕುಸ್ವಾಮ್ಯ ನೀಡಲು ಪ್ರತ್ಯೇಕ ಕಾಯ್ದೆಗಳನ್ನು ರೂಪಿಸಲಾಗಿದೆ ಎಂದವರು ವಿವರಿಸಿದರು.

ವೇದಿಕೆಯ ಮೇಲೆ ಕೆ.ಎಸ್.ಸಿ.ಎಸ್.ಟಿ. ಪ್ರಾಜೆಕ್ಟ್ ಇಂಜಿನಿಯರ್ ಎಸ್.ಆರ್. ವಿನೀತ್ ಕುಮಾರ್, ಬಿ.ಐ.ಇ.ಟಿ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥೆ ಸುಜಾತ, ಪರೀಕ್ಷಾ ವಿಭಾಗದ ಡೀನ್ ಕುಮಾರಪ್ಪ ಹಾಗೂ ಸಂಶೋಧನಾ ವಿಭಾಗದ ಡೀನ್ ಡಾ. ಶಂಕರಮೂರ್ತಿ ಉಪಸ್ಥಿತರಿದ್ದರು.

# ಕುಮಾರಸ್ವಾಮಿ ಕಣಕ್ಕಿಳಿಯಲು ಬಿಜೆಪಿ ವರಿಷ್ಠರ ಸಲಹೆ



ಬೆಂಗಳೂರು, ಜ. 18 - ಕರ್ನಾಟಕ ಕಾಂಗ್ರೆಸ್‌ನ ಓಟಕ್ಕೆ ಕಡಿವಾಣ ಹಾಕಲು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡ ಸಲಹೆ ನೀಡಿದ್ದಾರೆ.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ದೆಹಲಿಯಲ್ಲಿ ಈ ನಾಯಕರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಅಮಿತ್ ಷಾ, ನಾಲ್ಕು ಕ್ಷೇತ್ರಗಳನ್ನು ಹೆಸರಿಸಿ, ಇವುಗಳ ಪೈಕಿ ಒಂದರಲ್ಲಿ ಕಣಕ್ಕಿಳಿಯುವಂತೆ ಹೇಳಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬಿಜೆಪಿ ನಡೆಸಿರುವ ಚುನಾವಣಾ ಪೂರ್ವ ಸಮೀಕ್ಷೆಯನ್ನು ಮುಂದಿಟ್ಟುಕೊಂಡು ಚರ್ಚೆ ಮಾಡಿರುವ ನಾಯಕರು ಕೆಲವು ಕ್ಷೇತ್ರಗಳಲ್ಲಿ ವರ್ಚಸ್ವಿ ಮತ್ತು ಪ್ರಭಾವಿ ನಾಯಕರನ್ನು ಕಣಕ್ಕಿಳಿಸುವ ಬಗ್ಗೆಯೂ ತೀರ್ಮಾನ ಕೈಗೊಂಡಿದ್ದಾರೆ.

28 ಕ್ಷೇತ್ರಗಳ ಪೈಕಿ ಜೆಡಿಎಸ್‌ಗೆ ಹಾಸನ, ಮಂಡ್ಯ, ತುಮಕೂರು ಹಾಗೂ ಕೋಲಾರ ಕ್ಷೇತ್ರಗಳನ್ನು ನೀಡಿರುವ ಮುಖಂಡರು ಚಿಕ್ಕಬಳ್ಳಾಪುರ ಇಲ್ಲವೇ ಬೆಂಗಳೂರು ಗ್ರಾಮಾಂತರ ಕೊನೆ ಗಳಿಗೆಯಲ್ಲಿ ಈ ಪಕ್ಷಕ್ಕೆ ದಕ್ಕುವ ಸಾಧ್ಯತೆ ಇದೆ.

ಕರ್ನಾಟಕದಲ್ಲಿ ಗೆಲುವೇ ಮಾನದಂಡ, ಅದನ್ನು ಆಧಾರವಾಗಿಟ್ಟು ಕೊಂಡೇ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ತೀರ್ಮಾನ ಕೈಗೊಂಡಿದ್ದಾರೆ. ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ನಂತರ ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಜೆಡಿಎಸ್ ಅಧಿಕೃತವಾಗಿ ಎನ್‌ಡಿಎ ಮೈತ್ರಿಕೂಟ ಸೇರಲಿದೆ. ಅಂದಿನ ಸಮಾರಂಭದಲ್ಲೇ ಕರ್ನಾಟಕದಲ್ಲಿ ಸೀಟು ಹಂಚಿಕೆ ಹಾಗೂ ಯಾರಿಗೆ ಯಾವ ಕ್ಷೇತ್ರ ಎಂಬ ಪಟ್ಟಿಯೂ ಹೊರಬೀಳಲಿದೆ.

ಕೇಂದ್ರ ನಾಯಕರೊಂದಿಗೆ ಚರ್ಚೆ ನಡೆಸಿದ ನಂತರ ಇಂದು ದೆಹಲಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಕರ್ನಾಟಕದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಕೂಟ ಬಲಪಡಿಸಿ ಎಲ್ಲಾ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವುದೇ ಮುಂದಿನ ಗುರಿ ಎಂದರು. ಬಿಜೆಪಿ ಗುರಿಯೂ ಇದೇ ಆಗಿದೆ, ರಾಜ್ಯಕ್ಕೆ ಒಳ್ಳೆಯದಾಗಬೇಕು ಎಂಬ ಏಕೈಕ ಉದ್ದೇಶದಿಂದ ಎನ್‌ಡಿಎ ಮೈತ್ರಿಕೂಟವನ್ನು ಜೆಡಿಎಸ್ ಸೇರಿದೆ ಎಂದರು.

ತಾವು ಕೇಂದ್ರ ಸಚಿವರಾಗುವ ವದಂತಿಗಳನ್ನು ಸಾರಾಸಗಟಾಗಿ ಅಲ್ಲಗಳೆದ ಕುಮಾರಸ್ವಾಮಿ, ಯಾವ ಕಾರಣಕ್ಕೆ ಈ ಸುದ್ದಿ ಹುಟ್ಟಿಕೊಂಡಿತು ಎನ್ನುವುದು ಈಗಲೂ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಯಾವ ಮೂಲಗಳಿಂದ ಇದು ಅಷ್ಟು ಪ್ರಾಮುಖ್ಯತೆ ಪಡೆಯಿತು ಎನ್ನುವುದೂ ಗೊತ್ತಿಲ್ಲ. ಎಲ್ಲಿಂದ ಹುಟ್ಟಿತು ಎನ್ನುವುದೂ ತಿಳಿದಿಲ್ಲ, ಮಾಧ್ಯಮಗಳ ಮೂಲಕವೇ ತಮಗೂ ಗೊತ್ತಾಯಿತು ಎಂದರು.

ಲೋಕಸಭಾ ಚುನಾವಣೆ ಹತ್ತಿರದಲ್ಲಿರುವಾಗ ಕೇಂದ್ರ ಮಂತ್ರಿಯಾಗಿ ಮಾಡುವುದೇನಿದೆ? ಇಷ್ಟು ಅಲ್ಪ ಅವಧಿಯಲ್ಲಿ ರಾಜ್ಯಕ್ಕೆ, ರಾಷ್ಟ್ರಕ್ಕೆ ಏನು ಸೇವೆ ಮಾಡಲು ಸಾಧ್ಯ? ಚುನಾವಣಾ ನೀತಿ ಸಂಹಿತೆ ಜಾರಿಯಾದ ಮೇಲೆ ಏನನ್ನೂ ಮಾಡಲು ಸಾಧ್ಯವಿಲ್ಲ. ಅದರಿಂದ ಉಪಯೋಗವೂ ಇಲ್ಲ. ಯಾವ ಕಾರಣಕ್ಕೆ ಆ ಸುದ್ದಿ ಹುಟ್ಟಿಕೊಂಡಿತು ಎನ್ನುವುದು ಅರ್ಥವಾಗುತ್ತಿಲ್ಲ ಎಂದರು.

# ಶಿವಸಂಚಾರ ನಾಟಕಗಳು ಮಾನವೀಯ ಮೌಲ್ಯಗಳನ್ನು ಸಾರುತ್ತವೆ

## ಜಗಳೂರಿನ ಕಾರ್ಯಕ್ರಮದಲ್ಲಿ ಸಾಣೆಹಳ್ಳಿ ಪಂಡಿತಾರಾಧ್ಯ ಶ್ರೀ

ಜಗಳೂರು, ಜ. 18 - ಶಿವಸಂಚಾರ ನಾಟಕಗಳಲ್ಲಿನ ತತ್ವ ಪದಗಳು, ಕಥೆಗಳು, ಮಾನವೀಯ ಮೌಲ್ಯಗಳನ್ನು ಸಾರುತ್ತವೆ ಎಂದು ಸಾಣೆಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದರು.

ಪಟ್ಟಣದ ಬಯಲು ರಂಗ ಮಂದಿರದಲ್ಲಿ ಮೂರು ದಿನಗಳ ಕಾಲ ಆಯೋಜಿಸಿದ್ದ ಶಿವಸಂಚಾರ ನಾಟಕೋತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

**ಮುಖ್ಯ ಮಂತ್ರಿಗಳಿಗೆ ಅಭಿನಂದನೆ ;** ಸಾಮಾಜಿಕ ನ್ಯಾಯದ ಹರಿಕಾರ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಘೋಷಿಸಿದ್ದು ಸ್ವಾಗತಾರ್ಹ, ಅವರನ್ನು ಅಭಿನಂದಿಸುವುದಾಗಿ ತಿಳಿಸಿದ ಶ್ರೀಗಳು, ಇದರಿಂದ ಬಸವಣ್ಣನ ಸಾಧನೆ ಕೊಡುಗೆಗಳು, ಸಮಾಜಕ್ಕೆ ಪರಿಚಯವಾಗುತ್ತವೆ. ನಮ್ಮ ದೃಷ್ಟಿಯಲ್ಲಿ ವಿಶ್ವದ ಸಾಂಸ್ಕೃತಿಕ ನಾಯಕ ನಾಗಬೇಕಿದೆ ಎಂದು ತಿಳಿಸಿದರು.



ಶಿವಸಂಚಾರ ನಾಟಕೋತ್ಸವದಲ್ಲಿ ಅಭಿನಯಿಸಿದ ಜೊತೆಗಿರುವನು ಚಂದಿರ, ತಾಳಿಯ ತಕರಾರು, ಕಲ್ಯಾಣದ ಬಾಗಿಲು, ಮೂರು ನಾಟಕಗಳು ಅರ್ಥಪೂರ್ಣ ಕಥೆಗಳಾಗಿವೆ. ಇವುಗಳನ್ನು ತಾಲ್ಲೂಕಿನಲ್ಲಿ ಧಾರವಾಹಿ ವ್ಯಾಮೋಹ ತೊರೆದು ನಾಟಕ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಲಾಭಿಮಾನಿ ಪ್ರೇಕ್ಷಕರು ಆಗಮಿಸಿರುವುದು ಅನ್ಯ ತಾಲ್ಲೂಕುಗಳಿಗೆ ಚಾಟಿ ಬೀಸುವಂತಿದೆ ಎಂದು ಪ್ರಶಂಸಿದರು.

ಫೆ.2 ಮತ್ತು 3 ರಂದು ಚಿತ್ರದುರ್ಗ ಮತ್ತು ಚಿಕ್ಕಮಂಗಳೂರು ಎರಡು ಜಿಲ್ಲೆಗಳ ಒಂದಾಗಿ ಸಾಹಿತ್ಯೋತ್ಸವ ಕಾರ್ಯಕ್ರಮ ನಡೆಯಲಿದ್ದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ಹೇಳಿದರು.

ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಮನುಷ್ಯ ಇತರರಿಗೆ ಒಳಿತು ಬಯಸುವ ಜೊತೆಗೆ ತಾನು ಜೀವನದಲ್ಲಿ ಗಳಿಕೆಯ ಒಂದು ಭಾಗವನ್ನು ದಾನ ಮಾಡಬೇಕು. ಕಲಾವಿದನ ಬದುಕು ಶೋಚನೀಯ ಆರ್ಥಿಕ ನೆರವಿನೊಂದಿಗೆ ಕಲೆಯನ್ನು ಪ್ರೋತ್ಸಾಹಿಸುವ ಮನೋಭಾವ ಮೈಗೂಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉದ್ಯಮಿ ಅಣಬೇರು ರಾಜಣ್ಣ, ಡಾ.ರವಿಕುಮಾರ್, ಜಿ.ಪಂ. ಮಾಜಿ ಸದಸ್ಯ ಎಸ್.ಕೆ. ಮಂಜುನಾಥ್, ನಿವೃತ್ತ ಉಪನ್ಯಾಸಕ ಸುಭಾಷ್ ಚಂದ್ರ ಬೋಸ್, ಶಿವಣ್ಣಗೌಡ, ಶಿವಕುಮಾರ ನಾಟಕ ತಂಡದ ಸಂಚಾಲಕ, ರಾಜು, ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್, ಪಲ್ಲಾಗಟ್ಟೆ ಶೇಖರಪ್ಪ ಮುಂತಾದವರು ಇದ್ದರು.

# ಹೊಸ ಹುಂಡೈ ಕ್ರೆಟಾ ಭರ್ಜರಿ ಎಂಟ್ರಿ




ದಾವಣಗೆರೆ, ಜ. 18- ಹುಂಡೈ ಮೋಟಾರ್ ಇಂಡಿಯಾ ಕಂಪನಿಯ ಬಹು ನಿರೀಕ್ಷಿತ ಹೊಸ 'ಹುಂಡೈ ಕ್ರೆಟಾ' ಕಾರನ್ನು ನಗರದ ಕೆ.ಜೆ. ಹುಂಡೈ ಶೋ ರೂಂ ನಲ್ಲಿ ಆರ್.ಟಿ.ಓ. ಅಧಿಕಾರಿ ಸಿ.ಎಸ್. ಪ್ರಮುತೇಶ್ ಮಾರುಕಟ್ಟೆಗೆ ಪರಿಚಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಜೆ. ಹುಂಡೈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಜೆ.ಅಫಕ್ ರಜ್ವಿ ಅವರು, ಹುಂಡೈ ಕ್ರೆಟಾ ಬ್ರ್ಯಾಂಡ್‌ನ ಯಶಸ್ಸು ಮತ್ತು ಪರಂಪರೆಯ ಮೇಲೆ ಹೊಸ ವಾಹನ ಉತ್ಪಾದಿಸಲಾಗಿದೆ ಎಂದು ತಿಳಿಸಿದರು.

ಹುಂಡೈ ಜನಪ್ರಿಯ ಎಸ್‌ಯುವಿಗಳಲ್ಲಿ ಕ್ರೆಟಾ ಕೂಡ ಒಂದು. 4,330 ಎಂಎಂ ಉದ್ದ, 1,790 ಎಂಎಂ ಅಗಲ ಮತ್ತು 1,635 ಎಂಎಂ ಎತ್ತರವನ್ನು ಹೊಸ ಕ್ರೆಟಾ ಹೊಂದಿದೆ. ಡ್ಯುಯಲ್-ಝೋನ್ ಕ್ಲೈಮೇಟ್ ಕಂಟ್ರೋಲ್, ವಿಹಂಗಮ ಸನ್‌ರೂಫ್, ವೆಂಟಿಲೇಟೆಡ್ ಸೀಟ್‌ಗಳು, ಸ್ಟೀರಿಂಗ್ ಮೌಂಟೆಡ್ ಕಂಟ್ರೋಲ್‌ಗಳು, ಮಲ್ಟಿ ಕಲರ್‌ಅಂಬಿಯೆಂಟ್ ಲೈಟಿಂಗ್, ಆಪಲ್ ಕಾರ್ ಪ್ಲೇ, ಅಂಡ್ರಾಯ್ಡ್ ಆಟೋ, ಕನೆಕ್ಟೆಡ್ ಕಾರ್‌ಟೆಕ್, ವಾಯ್ಸ್ ಕಮಾಂಡ್‌ಗಳು ಸೇರಿ ಸಾಕಷ್ಟು ವೈಶಿಷ್ಟ್ಯಗಳನ್ನು ಹೊಂದಿದೆ ಎಂದರು.

ಸಮಾರಂಭದಲ್ಲಿ ಕೆ.ಜೆ.ಹುಂಡೈ ಸಂಸ್ಥೆಯ ಅಧ್ಯಕ್ಷರಾದ ಕೆ.ಜಾವೀದ್ ಸಾಬ್, ವ್ಯವಸ್ಥಾಪಕ ನಿರ್ದೇಶಕರಾದ ಕೆ.ಜೆ.ಅಫಕ್ ರಜ್ವಿ, ಸಂಸ್ಥೆಯ ನಿರ್ದೇಶಕರಾದ ಕೆ.ಜೆ. ಅಬ್ರಾರ್, ವ್ಯವಸ್ಥಾಪಕರಾದ ಶ್ರೀಮತಿ ಅಂಜಲಿ ಹಾಗೂ ಇತರರು ಉಪಸ್ಥಿತರಿದ್ದರು.

## ಅಯೋಧ್ಯೆ ರಾಮ ಮಂದಿರದಲ್ಲಿ ಮೂರ್ತಿ ಸ್ಥಾಪನೆ

ಅಯೋಧ್ಯೆ, ಜ. 18 – ಅಯೋಧ್ಯೆ ರಾಮ ಜನ್ಮಭೂಮಿ ದೇವಾಲಯದ ಗರ್ಭಗುಡಿಯಲ್ಲಿ ನೂತನ ರಾಮ ದೇವರ ಮೂರ್ತಿಯನ್ನು ಸ್ಥಾಪಿಸಲಾಗಿದೆ.

ಜನವರಿ 22ರಂದು ಪ್ರಾಣ ಪ್ರತಿಷ್ಠಾಪನೆ ನೆರವೇರುವ ಹಿನ್ನೆಲೆಯಲ್ಲಿ ಬಾಲರಾಮ ಮೂರ್ತಿಯನ್ನು ದೇವಾಲಯಕ್ಕೆ ತರಲಾಗಿದೆ. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಮೂರ್ತಿಯನ್ನು ರೂಪಿಸಿದ್ದಾರೆ.

ಪ್ರಾಣ ಪ್ರತಿಷ್ಠಾಪನೆ ನೆರವೇರಿಸುವ ಅರ್ಚಕರಲ್ಲಿ ಒಬ್ಬರಾಗಿರುವ ಅರುಣ್ ದೀಕ್ಷಿತ್ ಅವರು ಮಂತ್ರಘೋಷಗಳ ನಡುವೆ ಮೂರ್ತಿಯನ್ನು ದೇವಾಲಯದ ಗರ್ಭಗುಡಿಯಲ್ಲಿ ಇರಿಸಿದರು. ಟ್ರಸ್ಟ್‌ನ ಸದಸ್ಯರಾದ ಅನಿಲ್ ಮಿಶ್ರ ಅವರು 'ಪ್ರಧಾನ ಸಂಕಲ್ಪ' ನೆರವೇರಿಸಿದರು ಎಂದು ದೀಕ್ಷಿತ್ ಹೇಳಿದರು.

# ಶಾಲೆ - ಪೋಷಕ - ಶಿಕ್ಷಕ ತ್ರಿಭುಜಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಭದ್ರ ಬುನಾದಿ



ದಾವಣಗೆರೆ, ಜ.18- ನಗರದ ಶ್ರೀ ಶಾರದಾ ಐಐಟಿ ಮೆಡಿಕಲ್ ಅಕಾಡೆಮಿ, ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನಲ್ಲಿ ಶಾರದೋತ್ಸವ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಸ್. ಎಸ್ ಮೆಡಿಕಲ್ ಕಾಲೇಜಿನ ಡಾ. ಶಶಿಕಲಾ ಕೃಷ್ಣಮೂರ್ತಿ ಅವರು ಮಾತನಾಡಿ, ಶಾಲೆ, ಪೋಷಕ, ಶಿಕ್ಷಕರು, ವಿದ್ಯಾರ್ಥಿಗಳ ಭವಿಷ್ಯದ ಬುನಾದಿಗಳಿದ್ದಂತೆ. ಇಂದಿನ ಮಕ್ಕಳು ಶಿಸ್ತಿನಿಂದ ತಮ್ಮ ಶಿಕ್ಷಣದ ಅಭ್ಯಾಸ ಮಾಡಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ರೈತರಾದ ಹಾಲುವರ್ತಿ ದ್ಯಾಮಪ್ಪ ಹಾಗೂ ಯೋಧರಾದ ಬಿಳಿಚೊಡು ವೀರಭದ್ರಪ್ಪ ಅವರನ್ನು ಸನ್ಮಾನಿಸಲಾಯಿತು, ಹಾಗೂ 2022-23 ನೇ ಸಾಲಿನ ದ್ವಿತೀಯ ಪಿಯುಸಿ ನೀಟ್ ಹಾಗೂ ಜೆಇಇ ಪರೀಕ್ಷೆಗಳಲ್ಲಿ ಉತ್ತಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು.

ಡಾ. ಅನಿಲ್ ಕುಮಾರ್ ಶ್ಯಾಗಲೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಮಲೇಬೆನ್ನೂರು : 10ನೇ ದಿನಕ್ಕೆ ಸತ್ಯಾಗ್ರಹ



ಮಲೇಬೆನ್ನೂರು, ಜ.18- ಭಾನುವಳ್ಳಿ ಗ್ರಾಮದ ರಾಜವೀರ ಮದಕರಿ ನಾಯಕ ಮಹಾದ್ವಾರದ ಪಕ್ಕದಲ್ಲಿ ಅನಧಿಕೃತವಾಗಿ ಪ್ರತಿಷ್ಠಾಪಿಸಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆ ತೆರವುಗೊಳಿಸುವಂತೆ ಒತ್ತಾಯಿಸಿ, ವಾಲ್ಮೀಕಿ ಸಮಾಜದವರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಗುರುವಾರ 10ನೇ ದಿನಕ್ಕೆ ಕಾಲಿಟ್ಟಿದೆ.

# ಕುಣೆಬೆಳಕೆರೆ : ವೃದ್ಧೆಗೆ ತತ್‌ಕ್ಷಣ ವಸತಿ ವ್ಯವಸ್ಥೆಗೆ ತಹಶೀಲ್ದಾರ್ ಸೂಚನೆ



ಮಲೇಬೆನ್ನೂರು, ಜ.18- ಕುಣೆಬೆಳಕೆರೆ ಗ್ರಾಮದಲ್ಲಿ 75 ವರ್ಷದ ವೃದ್ಧೆ ಶ್ರೀಮತಿ ಗಿರಿಜಮ್ಮ ಶಿವಪ್ಪ ಅವರಿಗೆ ತತ್‌ಕ್ಷಣ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡುವಂತೆ ತಹಶೀಲ್ದಾರ್ ಗುರುಬಸವರಾಜ್ ಅವರು ಪಿಡಿಓ ತಿಪ್ಪೇಸ್ವಾಮಿ ಅವರಿಗೆ ಸೂಚಿಸಿದರು.

ಕಳೆದ ವಾರವಷ್ಟೇ ಮಲೇಬೆನ್ನೂರು ಉಪತಹಶೀಲ್ದಾರ್ ಆರ್.ರವಿ ಅವರು ಗ್ರಾ.ಪಂ.ನವರ ಸಹಕಾರದಿಂದ ಬಸ್ ನಿಲ್ದಾಣದಲ್ಲಿ ಆಶ್ರಮ ಪಡೆದಿದ್ದ ಈ ವೃದ್ಧೆಯನ್ನು ಅಂಬುಲೆನ್ಸ್ ಮೂಲಕ ಚಿಕಿತ್ಸೆಗಾಗಿ ಹರಿಹರ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದ್ದರು.

ಚಿಕಿತ್ಸೆ ನಂತರ ವೃದ್ಧೆಯನ್ನು ಹರಿಹರದಲ್ಲಿರುವ ಅನಾಥಾಶ್ರಮಕ್ಕೆ ಬೀಡಲಾಗಿತ್ತು. ಆದರೆ, ವೃದ್ಧೆ ಗಿರಿಜಮ್ಮ ಅವರು ನಾನು ಕುಣೆಬೆಳಕೆರೆಯಲ್ಲೇ ಇರುತ್ತೇನೆಂದು ಬಂದು ಪುನಃ ಬಸ್ ನಿಲ್ದಾಣದಲ್ಲೇ ತಂಗಿದ್ದರು.

ಈ ವಿಷಯ ತಿಳಿದ ತಹಶೀಲ್ದಾರ್ ಗುರುಬಸವರಾಜ್, ಉಪತಹಶೀಲ್ದಾರ್ ಆರ್.ರವಿ ಅವರು, ಗುರುವಾರ ಬೆಳಿಗ್ಗೆಯೇ ಗ್ರಾಮಕ್ಕೆ ಆಗಮಿಸಿ, ಗ್ರಾಮಸ್ಥರೊಂದಿಗೆ ಚರ್ಚಿಸಿ, ಕೂಡಲೇ ಈ ವೃದ್ಧೆಗೆ ಇಲ್ಲಿಯೇ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡುವಂತೆ ಮತ್ತು ಊಟ-ಉಪಚಾರದ ವ್ಯವಸ್ಥೆ ಮಾಡುವಂತೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ವರ್ಷ ಪತಿ ಶಿವಪ್ಪ ಅವರ ನಿಧನರಾದ ನಂತರ ಗೌರಮ್ಮ ಅವರು ಒಬ್ಬಂಟಿಯಾಗಿದ್ದರಿಂದ ಉಪಚಾರ ಮಾಡುವವರಿಲ್ಲದೇ ನಿಶ್ಯಕ್ತಿಯಾಗಿದ್ದರು. ಅಲ್ಲದೇ ಚಪ್ಪೆಗೆ ಪೆಟ್ಟು ಬಿದ್ದು ನಡೆದಾಡುವುದಕ್ಕೂ ತೊಂದರೆಯಾಗಿತ್ತು. ಆಗ ಇವರನ್ನು ಹರಿಹರ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಈ ವೃದ್ಧೆಯ ಜೀವನ ನಿರ್ವಹಣೆಗಾಗಿ ಸರ್ಕಾರದಿಂದ ಮಾಸಾಶನ ಸೌಲಭ್ಯವನ್ನು ಈ ಹಿಂದೆಯೇ ಕಲ್ಪಿಸಿಕೊಡಲಾಗಿದೆ.

ಗ್ರಾ.ಪಂ. ಅಧ್ಯಕ್ಷ ನಾಗರಾಜ್, ಗ್ರಾ.ಪಂ. ಸದಸ್ಯರಾದ ಬಸವರಾಜಪ್ಪ, ಉಮೇಶ್, ಮಹಾದೇವಪ್ಪ, ಲತಾ, ಹಾಲಮ್ಮ ಗ್ರಾಮದ ಕೆ.ವಿಜಯಪ್ಪ, ರಾಮಪ್ಪ, ಅಂಜಿನಪ್ಪ, ತಿಪ್ಪೇಶಪ್ಪ ಮತ್ತು ಗ್ರಾಮ ಲೆಕ್ಕಾಧಿಕಾರಿ ದೇವರಾಜ್, ಪಿಡಿಓ ತಿಪ್ಪೇಸ್ವಾಮಿ ಮತ್ತಿತರರು ತಹಶೀಲ್ದಾರ್ ಭೇಟಿ ವೇಳೆ ಹಾಜರಿದ್ದರು.



# ಘಟಿಕೋತ್ಸವಕ್ಕೆ ಕೈ ಮಗ್ಗದ ಉಡುಗೆ: ಯುಜಿಸಿ ಸೂಚನೆ

**(1ನೇ ಪುಟದಿಂದ)** ಈಗಾಗಲೇ ಕೈ ಮಗ್ಗದ ಉಡುಗೆಗಳಿಗೆ ಪರಿವರ್ತನೆಯಾಗಿವೆ. ಆದರೂ, ಕೆಲ ವಿಶ್ವವಿದ್ಯಾನಿಲಯಗಳು ಉಡುಗೆಯ ವಿಧಾನವನ್ನು ಬದಲಿಸಿಲ್ಲ ಎಂದು ಯು.ಜಿ.ಸಿ. ಕಾರ್ಯದರ್ಶಿ ಮನೀಶ್ ಜೋಷಿ ಹೇಳಿದ್ದಾರೆ.

ಕೈ ಮಗ್ಗದಿಂದಾಗಿ ಗ್ರಾಮೀಣ ಭಾಗಗಳಲ್ಲಿರುವ ಹಲವರಿಗೆ ಉದ್ಯೋಗಾವಕಾಶವೂ ಸಿಗುತ್ತದೆ.

ಈ ದಿಸೆಯಲ್ಲಿ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಚಿತ್ರ ಹಾಗೂ ವಿಡಿಯೋಗಳೊಂದಿಗೆ ಮಾಹಿತಿ ನೀಡುವಂತೆಯೂ ಜೋಷಿ ಬರೆದ ಪತ್ರದಲ್ಲಿ ತಿಳಿಸಲಾಗಿದೆ.

# ಮತದಾರರ ಪಟ್ಟಿ ಮುದ್ರಣಾ ಕಾರ್ಯ ಪರಿಶೀಲಿಸಿದ ಡಿಸಿ ವೆಂಕಟೇಶ್



ದಾವಣಗೆರೆ, ಜ. 18- ನಗರದ ಗುಂಡಾಲ್ ಸಂಸ್ಥೆಗೆ ಗುರುವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರು, ಮತದಾರರ ಪಟ್ಟಿ ಮುದ್ರಣಾ ಕಾರ್ಯವನ್ನು ಪರಿಶೀಲಿಸಿದರು. ಈ ಸಂಸ್ಥೆಯು ಬೂತ್ ಮಟ್ಟದಲ್ಲಿ ಪರಿಷ್ಕರಿಸಲ್ಪಟ್ಟ ಮತದಾರರ ಪಟ್ಟಿಯನ್ನು ಮುದ್ರಿಸಿ ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸುತ್ತಿದೆ. ಸಂಸ್ಥೆಯ ಮುಖ್ಯಸ್ಥ ಮಂಜುನಾಥ್ ಗುಂಡಾಲ್ ಸೇರಿದಂತೆ ಚುನಾವಣಾ ಅಧಿಕಾರಿಗಳು, ಸಂಸ್ಥೆಯ ಸಿಬ್ಬಂದಿಗಳು ಈ ವೇಳೆ ಉಪಸ್ಥಿತರಿದ್ದರು.


## ಶ್ರೀಮತಿ ಬಸಾಪತಿ ಸೌಭಾಗ್ಯಮ್ಮ ನಿಧನ



ದಾವಣಗೆರೆ ಇಜಾದಾರಗಲ್ಲಿ ಮಹಾರಾಜಪೇಟೆ ವಾಸಿ ಶ್ರೀ ಬಸಾಪತಿ ತಿಪ್ಪೇಸ್ವಾಮಿ ಅವರ ಧರ್ಮಪತ್ನಿ

**ಶ್ರೀಮತಿ ಬಸಾಪತಿ ಸೌಭಾಗ್ಯಮ್ಮ**

ಇವರು ದಿನಾಂಕ 18.1.2024ರಂದು ಗುರುವಾರ ಮಧ್ಯಾಹ್ನ 3.45ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 60 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.1.2024ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 88845 29582, 94480 20417**


## ದೋಣಿ ಮಗುಚಿ 14 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರ ಸಾವು

ವಡೋದರ, ಜ. 18 – ಗುಜರಾತ್‌ನ ವಡೋದರ ನಗರದ ಹೊರ ವಲಯದಲ್ಲಿರುವ ಕೊಳದಲ್ಲಿ ದೋಣಿ ಮಗುಚಿ 14 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕೊಳಕ್ಕೆ ವಿಹಾರಕ್ಕೆಂದು ತೆರಳಿದಾಗ ಅವಘಡ ಸಂಭವಿಸಿದೆ. ಓರ್ವ ವಿದ್ಯಾರ್ಥಿಯನ್ನು ರಕ್ಷಿಸಲಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಾಲ್ವರು ಇನ್ನೂ ಕಾಣೆಯಾಗಿದ್ದಾರೆ. ಅವರ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ ಮುಂದುವರೆಸಲಾಗುತ್ತಿದೆ.

# ಹರಿಹರದಲ್ಲಿ ಲಾರಿ ಚಾಲಕರ ಧರಣಿ, ಸತ್ಯಾಗ್ರಹ



ಹರಿಹರ, ಜ.18- ತುಂಗಭದ್ರಾ ಲಾರಿ ಚಾಲಕರ ಮತ್ತು ಕ್ಲೀನರ್ ಶ್ರೇಯೋಭಿವೃದ್ಧಿ ಸಂಘದ ವತಿಯಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ, ಲಾರಿ ಸಾಗಾಟ ಸ್ಥಗಿತಗೊಳಿಸಿ ಧರಣಿ ಸತ್ಯಾಗ್ರಹ ನಡೆಸಿದರು.

ಈ ವೇಳೆ ಲಾರಿ ಚಾಲಕರ ಸಂಘದ ಅಧ್ಯಕ್ಷ ಯುಸೂಫ್ ಮಾತನಾಡಿ, ಮೋಟಾರು ಚಾಲಕ, ಮಾಲೀಕರಿಗೆ ಹೊಸದಾಗಿ ತಂದಿರುವ ಕಾನೂನು ಪ್ರಕಾರ ಅಪಘಾತದಲ್ಲಿ ಮೃತರಾದರೆ, ಚಾಲಕನಿಗೆ 5 ರಿಂದ 10 ವರ್ಷಗಳ ಸೆರೆವಾಸ ಮತ್ತು 7 ಲಕ್ಷ ದಂಡ ತೆರಬೇಕಾಗುತ್ತದೆ. ಆದರೆ ಹಳೆಯ 304 ಎ ಪ್ರಕಾರ ಮೃತಪಟ್ಟರೆ, ಎರಡು ವರ್ಷಗಳವರೆಗೆ ಮಾತ್ರ ಸೆರೆವಾಸ ಇತ್ತು. ಹಾಗಾಗಿ ಹಳೆಯ ಕಾನೂನು ಜಾರಿಗೆ ತರಬೇಕು. ಲಾರಿ ಮೇಲೆ ದೇಶದ 70 ರಷ್ಟು ಲಾರಿ ಚಾಲಕರ ಜೀವನವನ್ನು ಹೊಂದಿದ್ದು, ಈ ಹೊಸ ಕಾನೂನು ಜಾರಿಗೆ ತಂದು ಚಾಲಕರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಒಂದು ವೇಳೆ ಕಾನೂನು ಹಿಂಪಡೆಯದೇ ಹೋದರೆ, ದಿ. 17 ರಂದು ರಾಜ್ಯ ಫೆಡರೇಷನ್ ಆಫ್ ಕರ್ನಾಟಕ ಲಾರಿ ಮಾಲೀಕರ ಸಂಘದವರು ಕರೆದಿರುವ ಮುಷ್ಕರಕ್ಕೆ ತುಂಗಭದ್ರಾ ಲಾರಿ ಚಾಲಕರು ಮತ್ತು ಕ್ಲೀನರ್ ಶ್ರೇಯಾಭಿವೃದ್ಧಿ ಸಂಘ ಕೈ ಜೋಡಿಸಿ ಮುಷ್ಕರಕ್ಕೆ ಬೆಂಬಲ ನೀಡಿ, ಲಾರಿಗಳ ಸಂಚಾರ ಸ್ಥಗಿತಗೊಳಿಸಲಿದೆ. ಗೂಡ್ಸ್ ಲಾರಿ ಸಂಘ, ಆಟೋ ಚಾಲಕರ ಮತ್ತು ಮಾಲೀಕರ ಸಂಘ, ಫುಟ್‌ಪಾತ್ ಹಣ್ಣು, ತರಕಾರಿ, ಹೂವು, ಎಗ್‌ರೈಸ್ ವ್ಯಾಪಾರಿ ಸಂಘ, ಕಾರು ಟ್ಯಾಕ್ಸಿ ಮಾಲೀಕರ ಸಂಘ ನಮ್ಮ ಹೋರಾಟಕ್ಕೆ ಬೆಂಬಲ ನೀಡಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಎಂದು ಹೇಳಿದರು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿ, ಲಾರಿ ಚಾಲಕರು ಮಾಡುತ್ತಿರುವ ಹೋರಾಟ ನ್ಯಾಯಬದ್ಧ ಹೋರಾಟವಾಗಿದೆ. ಸರ್ಕಾರ ಈ ಕೂಡಲೇ ಅವರ ಹೋರಾಟಕ್ಕೆ ಸ್ಪಂದಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಂಬಯ್ಯ, ಇಮ್ರಾನ್, ಜಪಾನ್ ರಫಿಕ್ ಸಾಬ್, ಹಿದಾಯತ್, ಸಲ್ಮಾನ್, ವಾಸು ಪಾಂಡು, ಅಬ್ದುಲ್ ಗಫೂರ್, ರಾಜು ಬಸಪ್ಪ, ಜಂಬಯ್ಯ, ಖಲೀಲ್ ಸಾಬ್, ಜಿಯಾವುಲ್ಲಾ,ಇಮ್ರಾನ್ ಕೆ.ಅಕ್ಬರ್, ಮೆಹಬೂಬ್ ಸಾಬ್, ಶರೀಫ್ ಸಾಬ್, ಫಕ್ರುದ್ದೀನ್, ಚಿಟ್ಟಿ ಗಫೂರ್ ಸಾಬ್, ಹರೀಶ್ ಇತರರು ಹಾಜರಿದ್ದರು.

## 22ರಂದು ಕೇಂದ್ರ ವಲಯದ ಬ್ಯಾಂಕುಗಳಿಗೆ ಅರ್ಧ ದಿನ ರಜೆ

ನವದೆಹಲಿ, ಜ. 18 – ಜನವರಿ 22ರಂದು ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆಯಲಿರುವ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು, ವಿಮಾ ಕಂಪನಿಗಳು, ಹಣಕಾಸು ಸಂಸ್ಥೆಗಳು ಹಾಗೂ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳಿಗೆ ಅರ್ಧ ದಿನ ರಜೆ ಘೋಷಿಸಲಾಗಿದೆ.

ರಜೆ ಬಗ್ಗೆ ಹಣಕಾಸು ಸಚಿವಾಲಯ ಅಧಿಸೂಚನೆ ಪ್ರಕಟಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಜನವರಿ 22ರಂದು ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**☞ ಮಾಲ್ಡೀವ್ಸ್ ಅಭಿವೃದ್ಧಿಗೆ ಬದ್ಧ : ಭಾರತ**
ನವದೆಹಲಿ : ಮಾಲ್ಡೀವ್ಸ್ ದ್ವೀಪದಲ್ಲಿ ಹಲವಾರು ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವ ಜೊತೆಗೆ, ಆ ದೇಶದ ಅಭಿವೃದ್ಧಿಗೆ ಭಾರತ ಬದ್ಧವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

**☞ ರಾಮ ಮಂದಿರದ ಅಂಚೆ ಚೀಟಿ ಬಿಡುಗಡೆ ಮಾಡಿದ ಪ್ರಧಾನಿ**
ನವದೆಹಲಿ : ಅಯೋಧ್ಯೆ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದ್ದಾರೆ. ವಿಶ್ವದಾದ್ಯಂತ ರಾಮ ದೇವರ ಹೆಸರಿನಲ್ಲಿ ಬಿಡುಗಡೆ ಮಾಡಿರುವ ಅಂಚೆ ಚೀಟಿಗಳ ಸಂಗ್ರಹದ ಪುಸ್ತಕವೊಂದನ್ನೂ ಅವರು ಬಿಡುಗಡೆ ಮಾಡಿದ್ದಾರೆ. ಈ ಅಂಚೆ ಚೀಟಿಗಳು ಕೇವಲ ಕಾಗದವಲ್ಲ, ಇವು ಭವಿಷ್ಯದ ಪೀಳಿಗೆಗೆ ಐತಿಹಾಸಿಕ ಘಟನೆಗಳಾಗಲಿವೆ ಎಂದು ಪ್ರಧಾನಿ ಹೇಳಿದ್ದಾರೆ.

**☞ ಜಾರಿ ನಿರ್ದೇಶನಾಲಯದ ಎದುರು ಹಾಜರಿಗೆ ಕೇಜ್ರಿವಾಲ್ ನಕಾರ**
ನವದೆಹಲಿ : ಜಾರಿ ನಿರ್ದೇಶನಾಲಯದ ಎದುರು ಹಾಜರಾಗಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಾಲ್ಕನೇ ಬಾರಿ ನಿರಾಕರಿಸಿದ್ದಾರೆ. ತಮಗೆ ನೀಡಲಾಗಿರುವ ಸಮನ್ಸ್ ಅಕ್ರಮ ಹಾಗೂ ರಾಜಕೀಯ ಪ್ರೇರಿತ. ಲೋಕಸಭಾ ಚುನಾವಣೆಗೆ ಮುಂಚೆ ತಮ್ಮನ್ನು ಬಂಧಿಸಲು ಸಂಚು ನಡೆಯುತ್ತಿದೆ ಎಂದವರು ಆರೋಪಿಸಿದ್ದಾರೆ.

**☞ ಕಮಲ್ ನಾಥ್‌ಗೆ ಟೀಕೆ; ಶರ್ಮಾಗೆ ಖೇರ ನೋಟಿಸ್**
ನವದೆಹಲಿ : ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಮಾಧ್ಯಮ ತಂಡದ ಸದಸ್ಯ ಅಲೋಕ್ ಶರ್ಮಾ ಅವರು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್ ನಾಥ್ ಟೀಕಿಸಿದ್ದಾರೆ. ಈ ಬಗ್ಗೆ ಉತ್ತರಿಸುವಂತೆ ಶರ್ಮ ಅವರಿಗೆ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ ನೋಟಿಸ್ ಕಳಿಸಿದ್ದಾರೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸೋಲಿಗೆ ಕಮಲ್ ನಾಥ್ ಕಾರಣ ಎಂದು ಶರ್ಮಾ ಆರೋಪಿಸಿದ್ದರು.

**☞ ಇರಾನ್ ಇಷ್ಟಪಡುವ ದೇಶವಲ್ಲ : ಬಿಡೆನ್**
ನವದೆಹಲಿ : ಪಾಕಿಸ್ತಾನದ ಮೇಲೆ ಇರಾನ್ ದಾಳಿ ನಡೆಸಿರುವುದನ್ನು ಖಂಡಿಸಿರುವ ಅಮೆರಿಕದ ಅಧ್ಯಕ್ಷ ಜೋ ಬಿಡೆನ್, ಈ ಪ್ರಾಂತ್ಯದಲ್ಲಿ ಇರಾನ್ ಇಷ್ಟಪಡುವ ದೇಶವಲ್ಲ ಎಂಬುದು ಕಂಡು ಬರುತ್ತಿದೆ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಆ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತೇವೆ ಎಂದಿದ್ದಾರೆ.

**☞ ಜೋಡೋ ಯಾತ್ರೆ ವಿರುದ್ಧ ಎಫ್.ಐ.ಆರ್.**
ನವದೆಹಲಿ : ಅಸ್ಸಾಂ ಜೊರ್ಹತ್ ನಗರದಲ್ಲಿ ಭಾರತ್ ಜೋಡೋ ನ್ಯಾಯ ಯಾತ್ರೆ ನಿಗದಿತ ಮಾರ್ಗವನ್ನು ಬದಲಿಸಿದೆ ಎಂದು ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ. ಜೋಡೋ ಯಾತ್ರೆ ಹಾಗೂ ಅದರ ಮುಖ್ಯ ಸಂಘಟಕ ಕೆ.ಬಿ. ಬೈಜು ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

## ಸರಕು ಹಡಗಿನ ಮೇಲೆ ದಾಳಿ ; ನೆರವು

ನವದೆಹಲಿ, ಜ. 18 - ಒಂಭತ್ತು ಭಾರತೀಯರೂ ಸೇರಿದಂತೆ 22 ಸಿಬ್ಬಂದಿ ಇದ್ದ ಸರಕು ಸಾಗಣೆ ಹಡಗಿನ ಮೇಲೆ ಗಲ್ಫ್ ಆಫ್ ಈಡನ್‌ನಲ್ಲಿ ದಾಳಿ ನಡೆಸಲಾಗಿದೆ. ಭಾರತೀಯ ನೌಕಾ ದಳ ಈ ಬಗ್ಗೆ ಕ್ಷಿಪ್ರವಾಗಿ ಕ್ರಮ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹಡಗಿನಿಂದ ಸಂಕಷ್ಟದ ಕರೆ ಬಂದ ಒಂದು ಗಂಟೆಯಲ್ಲೇ ಐ.ಎನ್.ಎಸ್. ವಿಶಾಖಪಟ್ಟಣಂ ಸಮರ ನೌಕೆಯು ಕಾರ್ಯತತ್ಪರ ವಾಗಿತ್ತು. ಪೋರ್ಟ್ ಆಡೆನ್ ದಕ್ಷಿಣದ 60 ನಾಟಿಕಲ್ ಮೈಲಿ ದೂರದಲ್ಲಿ ಹಡಗಿನ ಮೇಲೆ ದಾಳಿ ನಡೆಸಲಾಗಿತ್ತು.

# ಪಾರದರ್ಶಕ ವ್ಯವಸ್ಥೆ, ಪ್ರಾಮಾಣಿಕ ಪ್ರಯತ್ನದಿಂದ ಬಡತನ ಕಡಿಮೆಯಾಗಿದೆ



ನವದೆಹಲಿ, ಜ. 18 – ತಮ್ಮ ಸರ್ಕಾರ ಜಾರಿಗೆ ತಂದಿರುವ ಪಾರದರ್ಶಕ ವ್ಯವಸ್ಥೆ ಹಾಗೂ ಪ್ರಾಮಾಣಿಕ ಪ್ರಯತ್ನಗಳಿಂದ 25 ಕೋಟಿ ಜನರು ಒಂಭತ್ತು ವರ್ಷಗಳಲ್ಲಿ ಬಡತನದಿಂದ ಹೊರಗೆ ಬಂದಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಫಲಾನುಭವಿಗಳ ಜೊತೆ ವರ್ಚುಯಲ್ ಸಂವಾದ ನಡೆಸಿದ ಪ್ರಧಾನಿ, ಭಾರತದಲ್ಲಿ ಬಡತನ ಇಳಿಕೆಯಾಗಲಿದೆ ಎಂದು ಯಾರೊಬ್ಬರೂ ಭಾವಿಸಿರಲಿಲ್ಲ. ಆದರೆ, ಬಡವರಿಗೆ ಸಂಪನ್ಮೂಲ ನೀಡಿದರೆ ಬಡತನ ನಿವಾರಣೆ ಸಾಧ್ಯ ಎಂದರು.

ಬಡತನ ಇಳಿಕೆಯಾಗಿದೆ ಎಂಬ ನೀತಿ ಆಯೋಗದ ಇತ್ತೀಚಿನ ವರದಿ ಪ್ರಸ್ತಾಪಿಸಿರುವ ಪ್ರಧಾನಿ ಮೋದಿ, ಭಾರತವು ಇತರೆ ದೇಶಗಳಿಗೆ ಬಡತನ ನಿವಾರಣೆಗೆ ಮಾದರಿಯಾಗಿದೆ ಎಂದು ಹೇಳಿದರು.

ಈ ನಡುವೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪಕ್ಷ, ನೀತಿ ಆಯೋಗದ ವರದಿ ಕೇವಲ ಬೂಟಾಟಿಕೆ ಎಂದು ಹೇಳಿದೆ. ಕಳೆದ ಒಂಭತ್ತು ವರ್ಷಗಳಲ್ಲಿ 24.82 ಕೋಟಿ ಜನರು ಬಹುಮುಖಿ ಬಡತನದಿಂದ ಹೊರ ಬಂದಿದ್ದಾರೆ ಎಂದು ನೀತಿ ಆಯೋಗ ಹೇಳಿತ್ತು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ವಕ್ತಾರೆ ಸುಪ್ರಿಯ ಶ್ರೀನಟೆ, ನೀತಿ ಆಯೋಗವು ಬಡತನ ಅಳೆಯುವ ವಿಧಾನವನ್ನು ಬದಲಿಸಿದೆ. ವಿಶ್ವ ಬ್ಯಾಂಕ್ ಆಗಲಿ, ಐ.ಎಂ.ಎಫ್. ಆಗಲಿ, ಈ ರೀತಿಯ ವರದಿಗಳನ್ನು ಒಪ್ಪುವುದಿಲ್ಲ ಎಂದು ತಿಳಿಸಿದ್ದಾರೆ.

ನೀತಿ ಆಯೋಗವೇ ಸಮೀಕ್ಷೆ ನಡೆಸಿ ಈ ವರದಿಯನ್ನು ರೂಪಿಸಿದೆ. ಆದರೆ, ನೆಲದ ವಾಸ್ತವ ಬೇರೆಯೇ ಆಗಿದೆ. ವಾಸ್ತವವನ್ನು ಮುಚ್ಚಿಡಲಾಗದು. ಚುನಾವಣೆಯವರೆಗೆ ಈ ರೀತಿಯ ಪ್ರಚಾರಗಳು ನಡೆದಿರುತ್ತವೆ ಎಂದು ಶ್ರೀನಟೆ ಹೇಳಿದ್ದಾರೆ.

## ಮಲೇಬೆನ್ನೂರಿನಲ್ಲಿ ಗಮನ ಸೆಳೆದ ಆರ್‌ಐಎಫ್ ಸೇನೆಯ ಪಥ ಸಂಚಲನ



ಮಲೇಬೆನ್ನೂರು, ಜ.18- ಆಯೋಧ್ಯೆಯಲ್ಲಿ ಇದೇ ದಿನಾಂಕ 22ರಂದು ಶ್ರೀರಾಮ ಮಂದಿರ ಉದ್ಘಾಟನೆ ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಶಾಂತಿ-ಸುವ್ಯವಸ್ಥೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಆರ್‌ಐಎಫ್ ಸೇನೆ ಪಥಸಂಚಲನ ನಡೆಸಿತು.

ಸೇನೆಯ ಕಮಾಂಡರ್ ಸುನೀಲ್‌ಕುಮಾರ್ ನೇತೃತ್ವದಲ್ಲಿ 150 ಕ್ಕೂ ಹೆಚ್ಚು ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ ಸಿಬ್ಬಂದಿಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಿ ಗಮನ ಸೆಳೆದರು.

ಈ ವೇಳೆ ಪುರಸಭೆ ಸದಸ್ಯರಾದ ಸಾಬೀರ್ ಅಲಿ, ದಾದಾಪೀರ್, ನಯಾಜ್, ಖಲೀಲ್ ಅವರು ಸೇನೆಯ ಕಮಾಂಡರ್ ಸುನಿಲ್ ಕುಮಾರ್ ಅವರನ್ನು ಪಟ್ಟಣದ ಜನತೆಯ ಪರವಾಗಿ ಶಾಲು, ಹಾರ ಹಾಕಿ ಗೌರವಿಸಿದರು. ಮಲೇಬೆನ್ನೂರು ಪೊಲೀಸ್ ಠಾಣೆಯ ಪಿಎಸ್‌ಐ -2 ಪ್ರವೀಣ್ ಓಲೇಕಾರ್ ಹಾಗೂ ಸಿಬ್ಬಂದಿ ವರ್ಗದವರೂ ಪಥ ಸಂಚಲನಕ್ಕೆ ಸಾಥ್ ನೀಡಿದರು.

## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಜ.18- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನೀಡುವ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಅಲ್ಲಿಸುವ ಅವಧಿಯನ್ನು ನಾಡಿದ್ದು ದಿನಾಂಕ 20 ರವರೆಗೆ ವಿಸ್ತರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

# ಕಾನೂನು ಪಾಲನೆ ಎಲ್ಲರ ಕರ್ತವ್ಯ



### ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್

ದಾವಣಗೆರೆ, ಜ.18- ಕಾನೂನು ಎಲ್ಲರಿಗೂ ಒಂದೇ, ಯಾರೇ ವಾಹನಗಳನ್ನು ಚಾಲನೆ ಮಾಡಿದರೂ ಪ್ರತಿಯೊಬ್ಬರು ಮೋಟಾರು ವಾಹನ ಕಾಯಿದೆ ಪಾಲನೆ ಮಾಡಬೇಕಾದುದು ಆದ್ಯಕರ್ತವ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ. ಕರೆಣ್ಣವರ್ ತಿಳಿಸಿದರು.

ನಗರದ ಆರ್‌ಟಿಓ ಕಚೇರಿಯ ಸಭಾಂಗಣದಲ್ಲಿ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಜಿಲ್ಲಾ ವಕೀಲರ ಸಂಘ ಇವರ ಸಹಯೋಗದೊಂದಿಗೆ ನಿನ್ನೆ ಆಯೋಜಿಸಲಾಗಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ 2024ರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಯಾರೇ, ಯಾವುದೇ ವಾಹನಗಳನ್ನು ಬಳಕೆ ಮಾಡಲಿ, ಬಳಕೆ ಜತೆ ಕಾನೂನು, ಕಾಯಿದೆಗಳನ್ನು ತಿಳಿದುಕೊಳ್ಳುವುದು ಅಗತ್ಯ. ಒಂದು ವೇಳೆ ನಮಗೆ ಕಾನೂನು ಗೊತ್ತಿಲ್ಲ ಎನ್ನುವ ನಿರ್ಲಕ್ಷ್ಯ ಮಾತುಗಳಿಗೆ ಅವಕಾಶ ಇರುವುದಿಲ್ಲ ಎಂದು ಹೇಳಿದರು. ಕಾನೂನು ಉಲ್ಲಂಘನೆ ಮಾಡಿದರೆ ಕ್ರಮ ಅನಿವಾರ್ಯ. ಕಾನೂನು ಬಿಟ್ಟು ಏನು ಮಾಡಲು ಸಾಧ್ಯವಿಲ್ಲ. ಕಾನೂನು ಯಾರನ್ನೂ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.


ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಮಾತನಾಡಿ, ಎಲ್ಲಾ ಭಾರೀ ವಾಹನ ಚಾಲಕರು, ವಾಹನ ತರಬೇತಿ ಚಾಲನ ಕೇಂದ್ರಗಳು, ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ಕಾರ್ಯಕ್ರಮ ಆಯೋಜಿಸುತ್ತಿರುವುದು ಮಾದರಿ. ರಸ್ತೆ ಸುರಕ್ಷತಾ ಸಪ್ತಾಹ ಸಂದರ್ಭದಲ್ಲಿ ನಾವು ಕೇವಲ ವಾಹನ ಚಾಲನೆ ಮಾಡುವವರ ಕುರಿತು ಮತ್ತು ಕಾನೂನು ಉಲ್ಲಂಘನೆ ಕುರಿತು ಜಾಗೃತಿ ಮೂಡಿಸಿದರೆ ಸಾಕಾಗುವುದಿಲ್ಲ. ರಸ್ತೆಗಳ ಸುರಕ್ಷತೆ ಕಡೆಗೂ ಹೆಚ್ಚು ಗಮನ ಕೊಡಬೇಕಾಗಿದೆ. ಅವೈಜ್ಞಾನಿಕ ರಸ್ತೆ ತಡೆ, ಗುಂಡಿ ಬಿದ್ದ ರಸ್ತೆಗಳು, ರಿಪೇರಿಯಾಗದ ರಸ್ತೆಗಳಿಂದ ವಾಹನಗಳ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿವೆ. ಇದರ ಕಡೆಗೂ ಇಲಾಖೆಗಳು ಹೆಚ್ಚಿನ ಗಮನ ಹರಿಸಬೇಕು. ಪ್ರತಿಷ್ಠಿತ ಬಡಾವಣೆಗಳಲ್ಲಿ ತ್ರಿಬಲ್ ರೈಡಿಂಗ್ ಸೇರಿದಂತೆ ಕಾನೂನು ಉಲ್ಲಂಘನೆ ಆಗುತ್ತಿರುವುದು ಕಂಡುಬರುತ್ತಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಗಮನ ಹರಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮೋಟಾರು ವಾಹನ ನಿರೀಕ್ಷಕ ಮಹಮ್ಮದ್ ಖಾಲಿದ್, ಯಾವುದೇ ವಾಹನ ಯಾರೇ ಚಾಲನೆ ಮಾಡಲಿ ಅವರು ಕಡ್ಡಾಯವಾಗಿ ವಾಹನ ಚಾಲನಾ ಕಾನೂನನ್ನು ಪಾಲನೆ ಮಾಡಬೇಕು. ಯಂತ್ರದೊಂದಿಗೆ ಮಾನವ ಕೆಲಸ ಮಾಡಬೇಕಿದೆ. ತಂತ್ರಜ್ಞಾನ ಮುಂದುವರೆದಂತೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವಾಹನಗಳನ್ನು ನಿರ್ಮಾಣ ಮಾಡಲಾಗುತ್ತದೆ. ಅದಕ್ಕೆ ತಕ್ಕಂತೆ ವಾಹನ ಸವಾರರು ತಮ್ಮ ಸ್ಥಿತಿಗತಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮಥೇಶ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಆರ್‌ಟಿಓ ಇಲಾಖೆಯ ಅಧೀಕ್ಷಕ ಶಶಿಧರ್, ತಿಪ್ಪೇಶ್, ವೀರೇಶ್, ಸುರೇಶ್ ಇತರರು ಇದ್ದರು.

## ಸೀಟು ಹಂಚಿಕೆಯಾಗದೇ ಇದ್ದರೆ ಐ.ಎನ್.ಡಿ.ಐ.ಎ ಒಡಕು : ಫಾರೂಕ್ ಅಬ್ದುಲ್ಲಾ

ನವದೆಹಲಿ, ಜ. 18 – ಮುಂಬರುವ ಲೋಕಸಭಾ ಚುನಾವಣೆಯ ಸೀಟು ಹಂಚಿಕೆಗೆ ಐ.ಎನ್.ಡಿ.ಐ.ಎ. ಒಕ್ಕೂಟದಲ್ಲಿ ಒಮ್ಮತ ಮೂಡದೇ ಹೋದರೆ, ಒಕ್ಕೂಟದ ಕೆಲ ಸದಸ್ಯರು ಪ್ರತ್ಯೇಕ ಗುಂಪು ರಚಿಸಿಕೊಳ್ಳಬಹುದು ಎಂದು ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ. ಮಾಜಿ ಕೇಂದ್ರ ಸಚಿವ ಕಪಿಲ್ ಸಿಬಾಲ್ ಜೊತೆ ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಮಾತನಾಡಿರುವ ಅಬ್ದುಲ್ಲಾ, ಲೋಕ



ಸಭಾ ಚುನಾವಣೆಗೆ ಈಗ ಸ್ವಲ್ಪವಷ್ಟೇ ಸಮಯ ಉಳಿದಿದೆ ಎಂದರು. ಸೀಟು ಹಂಚಿಕೆಯ ಕುರಿತ ಪ್ರಶ್ನೆಗೆ ಉತ್ತರಿಸಿರುವ ಅಬ್ದುಲ್ಲಾ, ಈ ದೇಶವನ್ನು ಉಳಿಸಬೇಕಾದರೆ ಭಿನ್ನಾಭಿಪ್ರಾಯಗಳನ್ನು ಮರೆಯಬೇಕಿದೆ. ದೇಶದ ಬಗ್ಗೆ ಯೋಚಿಸಬೇಕಿದೆ ಎಂದರು. ಸೀಟು ಹಂಚಿಕೆಗೆ ವ್ಯವಸ್ಥೆ ಮಾಡಿಕೊಳ್ಳದೇ ಹೋದರೆ ಮೈತ್ರಿಕೂಟಕ್ಕೇ ಬೆದರಿಕೆ ಇದೆ. ಕಾಲಮಿತಿಯಲ್ಲಿ ಸೀಟು ಹಂಚಿಕೆ ಪೂರೈಸಬೇಕಿದೆ. ಸೀಟು ಹಂಚಿಕೆಯಾಗದೇ ಇದ್ದರೆ, ಕೆಲ ಪಕ್ಷಗಳು ಪ್ರತ್ಯೇಕ ಒಕ್ಕೂಟ ಸ್ಥಾಪಿಸಿಕೊಳ್ಳಬಹುದು. ಈಗಲೂ ಸಮಯ ಇದೆ ಎಂದವರು ತಿಳಿಸಿದರು.

# ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ: ದಲಿತ ಸಂಘರ್ಷ ಸಮಿತಿಯಿಂದ ನಗರದಲ್ಲಿ ಪ್ರತಿಭಟನೆ



ದಾವಣಗೆರೆ, ಜ.18- ಮುಸ್ಲಿಂ ಮಹಿಳೆಯರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದರೆನ್ನಲಾದ ರಾಷ್ಟ್ರೀಯ ಸ್ವಯಂ ಸೇವಕ ಪರಿವಾರದ ಪ್ರಮುಖ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಗೂಂಡಾ ಕಾಯ್ದೆಯಡಿ ಬಂಧಿಸಿ ಗಡಿಪಾರು ಮಾಡಬೇಕು. ಸಾಮಾಜಿಕ, ಶೈಕ್ಷಣಿಕ ಮತ್ತು ಜಾತಿ ಸಮೀಕ್ಷೆ ನಡೆಸಿರುವ ಕಾಂತರಾಜು ವರದಿಯನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ ಬಣದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸಂಗೊಳ್ಳಿ ರಾಯಣ್ಣ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರು ನಾಮಕರಣ ಮಾಡುವಂತೆ ಡಿಎಸ್ಸೆಸ್ ಜಿಲ್ಲಾ ಸಂಚಾಲಕ ಕುಂದುವಾಡದ ಮಂಜುನಾಥ್ ಆಗ್ರಹಿಸಿದರು.

ಜಿಲ್ಲಾದ್ಯಂತ ಇರುವ ಗುಡಿಸಲು ವಾಸಿಗಳಿಗೆ ನಿವೇಶನ ಒದಗಿಸಬೇಕು. ತುರ್ಚಘಟ್ಟ ಗ್ರಾಮದ ದಲಿತರ ಕೇರಿ ಯಲ್ಲಿ ಅಂಬೇಡ್ಕರ್ ಭವನಕ್ಕೆ ಜಾಗ ಮಂಜೂರು ಮಾಡಿ, ಭವನ ನಿರ್ಮಾಣ ಮಾಡಿಕೊಡುವಂತೆ ಆಗ್ರಹಿಸಿದರು. ದಲಿತರ ಮೇಲಿನ ಸುಳ್ಳು ಪ್ರಕರಣಗಳನ್ನು ವಜಾಗೊಳಿಸು ವಂತೆ ಆಗ್ರಹಿಸಿದ ಅವರು, ದಲಿತರನ್ನು ಸ್ವಾವಲಂಬಿಗಳ ನ್ನಾಗಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕೆ.ವಿಜಯಲಕ್ಷ್ಮಿ, ಪ್ರದೀಪ್, ಮಹಾಂತೇಶ್ ಹಾಲುವರ್ತಿ, ಆರ್.ಮಂಜುನಾಥ್, ಹನುಮಂತಪ್ಪ, ಖಾಲಿದ್ ಅಲಿ ಇತರರು ಪ್ರತಿಭಟನೆಯಲ್ಲಿದ್ದರು.

## ಸಚಿನ್ ಡೀಪ್‌ಫೇಕ್ ವಿಡಿಯೋ : ಪ್ರಕರಣ ದಾಖಲು

ಮುಂಬೈ, ಜ. 18 – ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರು ಗೇಮಿಂಗ್ ಆಪ್ ಒಂದರ ಪರ ಪ್ರಚಾರ ಮಾಡುತ್ತಿರುವಂತೆ ಡೀಪ್‌ಫೇಕ್ ವಿಡಿಯೋ ಮಾಡಿರುವ ಹಿನ್ನೆಲೆಯಲ್ಲಿ, ಗೇಮಿಂಗ್ ತಾಣ ಹಾಗೂ ಫೇಸ್‌ಬುಕ್ ಪುಟವೊಂದರ ವಿರುದ್ಧ ಮುಂಬೈ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ತೆಂಡೂಲ್ಕರ್ ಅವರ ವಿಡಿಯೋ ಅನ್ನು ಡೀಪ್‌ಫೇಕ್ ಮೂಲಕ ತಿರುಚಿದ ದೃಶ್ಯವನ್ನು ಫೇಸ್‌ಬುಕ್ ಮೂಲಕ ಹಂಚಿಕೊಳ್ಳಲಾಗಿತ್ತು. ಸಚಿನ್ ತೆಂಡೂಲ್ಕರ್ ಹಾಗೂ ಅವರ ಪುತ್ರಿ ಸಾರಾ ಅವರು ಆನ್‌ಲೈನ್ ಆಟದ ಮೂಲಕ ದೊಡ್ಡ ಮೊತ್ತದ ಹಣ ಗಳಿಸಿದ್ದಾರೆ ಎಂದು ಈ ವಿಡಿಯೋದಲ್ಲಿ ಹೇಳಲಾಗಿತ್ತು.

ಡೀಪ್‌ಫೇಕ್ ದುರ್ಬಳಕೆ ಮಾಡಿರುವ ಬಗ್ಗೆ ತೆಂಡೂಲ್ಕರ್ ಅವರು ಆಕ್ಷೇಪಿಸಿದ್ದರು. ಈ ರೀತಿಯ ಆಪ್‌ಗಳ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು ಎಂದೂ ಅವರು ಕರೆ ನೀಡಿದ್ದರು.

# ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ದೈಹಿಕ ಚಟುವಟಿಕೆ ಅಗತ್ಯ

### ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದಲ್ಲಿ ಮಧುಮೇಹ ತಜ್ಞ ಡಾ. ವಿ.ಜೆ.ಮಲ್ಲಿಕಾರ್ಜುನ್

ದಾವಣಗೆರೆ,ಜ.18- ಆರೋಗ್ಯಕರ ಆಹಾರ, ಔಷಧೋಪಚಾರದ ಜೊತೆಗೆ ದೈಹಿಕ ಚಟುವಟಿಕೆಗಳು ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಬಹಳ ಅಗತ್ಯ ಎಂದು ಬಾಪೂಜಿ ಹೈಟೆಕ್ ಆಸ್ಪತ್ರೆಯ ಮಧುಮೇಹ ತಜ್ಞ ಡಾ.ವಿ.ಜೆ. ಮಲ್ಲಿಕಾರ್ಜುನ್ ತಿಳಿಸಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದಲ್ಲಿ, ಸಕ್ಕರೆ ಕಾಯಿಲೆ ಕುರಿತಂತೆ ವಿಶೇಷ ಉಪನ್ಯಾಸ ನೀಡಿದ ಅವರು, ಯಾರೇ ಆಗಲಿ 35 ವರ್ಷ ಆದ ಮೇಲೆ ಶುಗರ್ ಚೆಕ್ ಮಾಡಿಸಬೇಕು. ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದರೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು.

ಸಿಹಿ ತಿನಿಸು ವಿಷವಿದ್ದ ಹಾಗೆ, ಅದನ್ನು ಬಿಟ್ಟು ಬಿಡಿ. ನಾರಿನ ಅಂಶವಿರುವ ಆಹಾರ ಸೇವಿಸಿ ಆದಷ್ಟು ಕಡಿಮೆ ಆಹಾರ ಸೇವಿಸಿ. ದಿನಕ್ಕೆ ಕನಿಷ್ಟ 30 ರಿಂದ 45 ನಿಮಿಷ ವಾಕ್ ಮಾಡಿ, ವ್ಯಾಯಾಮ ಮಾಡಿ. ರಕ್ತದಲ್ಲಿ ಸಕ್ಕರೆ ನಿಯಂತ್ರಣದಲ್ಲಿ ಇರದಿದ್ದರೆ, ಕಣ್ಣು, ಕಾಲು ಕಿಡ್ನಿಗೆ ಹಾನಿಯಾಗುತ್ತದೆ ಆದ್ದರಿಂದ ಮಧುಮೇಹಿಗಳು ಎಚ್ಚರವಹಿಸಬೇಕು. ವರ್ಷಕ್ಕೆ ಒಮ್ಮೆಯಾದರೂ ಕಣ್ಣಿನ ಪರೀಕ್ಷೆ ಮಾಡಿಸಬೇಕು.

ಇದೇನು ಸಾಂಕ್ರಾಮಿಕ ಅಲ್ಲ. ಮನೆಯಲ್ಲಿ ಎಲ್ಲರೂ ಏನು ಊಟ ಮಾಡುತ್ತಾರೋ ಅದನ್ನೇ ನೀವೂ ಊಟ ಮಾಡಿ, ಸಿಹಿ ಹೆಚ್ಚಿರುವ ಮಾವಿನ



ಹಣ್ಣು, ಹಲಸು, ಪಪ್ಪಾಯ, ಸಪೋಟ ಹಣ್ಣುಗಳನ್ನು ಬಿಟ್ಟು, ಕಿತ್ತಳೆ, ಮೊಸುಂಬೆ ಅಂತಹ ಕಡಿಮೆ ಸಕ್ಕರೆ ಅಂಶ ಇರುವ ಹಣ್ಣಗಳನ್ನು ಸೇವಿಸಿರಿ. ಹೆಚ್ಚಾಗಿ ನಾರಿನಂಶವಿರುವ ತರಕಾರಿ, ಬೇಳೆ ಕಾಳುಗಳನ್ನು ಸೇವಿಸುವಂತೆ ಸಲಹೆ ನೀಡಿದರು.

ಹೆಣ್ಣು ಮಕ್ಕಳಿಗೆ ಗರ್ಭಾವಸ್ಥೆಯಲ್ಲಿ ಬರುವ ಮಧುಮೇಹ ಪ್ರಸವದ ನಂತರ ಸರಿ ಹೋಗುತ್ತದೆ ಆದರೆ ಈ ಅವಧಿಯಲ್ಲಿ ಅವರು ಜಾಗೃತಿ ವಹಿಸಬೇಕು ಎಂದು ತಿಳಿಸಿದರು.

ನಾವು ಸಕ್ಕರೆ ಬೆರೆಸಿದ ಆಹಾರ ಸೇವಿಸದೆ ಬೆಲ್ಲವನ್ನು ಬಳಸಿದರೆ ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಿದ ಡಾ.ಮಲ್ಲಿಕಾರ್ಜುನ್ ಸಕ್ಕರೆ, ಬೆಲ್ಲ ಎರಡೂ ಕಬ್ಬಿನಿಂದಲೇ ಆಗುವುದಲ್ಲವೇ ? ಎರಡೂ ಮಧು ಮೇಹಿಗಳು ಸೇವಿಸಬಾರದು ಎಂದರು.

ಬಾಪೂಜಿ ಮಕ್ಕಳ ಆರೋಗ್ಯ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ನವಜಾತ ಶಿಶು ತಜ್ಞ ಡಾ. ಜಿ.ಗುರುಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಕ್ಕರೆ ಕಾಯಿಲೆ ಸಾಮಾನ್ಯ ಕಾಯಿಲೆಯಾಗಿದ್ದು, ಹೆದರುವ ಅವಶ್ಯಕತೆ ಇಲ್ಲ. ಆದರೆ ಭಾರತದಲ್ಲಿಯೇ ಹೆಚ್ಚಿನ ಮಧುಮೇಹಿಗಳು ಇರುವುದು ದುರಂತವಾಗಿದೆ. ಇನ್ನು 10 ವರ್ಷದಲ್ಲಿ ದುಪ್ಪಟ್ಟಾಗುವ ಸಂಭವವಿದೆ ಎಂದರು.

ಪ್ರಸ್ತುತ ಜನಿಸುವ ನೂರು ಮಕ್ಕಳಲ್ಲಿ 25 ಮಕ್ಕಳು ಕಡಿಮೆ ತೂಕವಿರುತ್ತದೆ. ಇಂತಹ ಮಕ್ಕಳಲ್ಲಿ ಯೇ ಮುಂದೆ ಸಕ್ಕರೆ ಕಾಯಿಲೆ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ ಹಾಗಾಗಿ ಹೆಣ್ಣು ಮಕ್ಕಳು ಗರ್ಭಿಣಿ ಇದ್ದಾಗ ಪೌಷ್ಠಿಕ ಆಹಾರ ಸೇವಿಸಿ, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪೋಷಕರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ತಿಂಗಳ ಮೊದಲ ಹಾಗೂ ಕೊನೆಯ ಗುರುವಾರಗಳಂದು ಈ ಆರೋಗ್ಯ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದಾಗಿ ಡಾ.ಗುರುಪ್ರಸಾದ್ ತಿಳಿಸಿದರು.

ಮಕ್ಕಳ ತಜ್ಞ ಬಾಣಾಪುರ ಮಠ, ಡಾ. ಮುರುಘರಾಜ ಕೌಜಲಗಿ, ಡಾ.ಎಸ್.ಎಸ್. ಪ್ರಕಾಶ್, ಡಾ.ಸುರೇಶ್, ಕಾರ್ಯಕ್ರಮದ ಸಂಯೋಜಕಿ ಸಿ.ಎಂ.ಅಂಜಲಿ, ವ್ಯವಸ್ಥಾಪಕ ಎಸ್.ಎನ್.ಗುಬ್ಬಿ ಮತ್ತಿತರರು ಹಾಜರಿದ್ದರು.

# ಯುವಶಕ್ತಿಗೆ ಮಾರ್ಗದರ್ಶನವಾಗಬಲ್ಲ ನಾಟಕಗಳು ಬೇಕು

### ಮಲ್ಲಾಡಿಹಳ್ಳಿ ರಂಗ ದಾಸೋಹ ಸಮಾರೋಪದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್

ಮಲ್ಲಾಡಿಹಳ್ಳಿ,ಜ.18- ಯುವಜನತೆಯು ಮೊಬೈಲ್ ಗೀಳಿನಿಂದ ಹೊರಬಂದು ವಿಧಾಯಕ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸುವಂತಹ ವಸ್ತುವುಳ್ಳ ನಾಟಕಗಳು ಬರಬೇಕು ಹಾಗೂ ಯುವ ಜನತೆಯನ್ನು ಮುಟ್ಟಬೇಕು ಎಂದು ಹಿರಿಯ ಪತ್ರಕರ್ತ ಹೆಚ್. ಬಿ.ಮಂಜುನಾಥ್ ಅಭಿಪ್ರಾಯ ಪಟ್ಟರು.

ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀ ರಾಘವೇಂದ್ರ ಸ್ವಾಮೀಜಿ, ಶ್ರೀ ಸೂರುದಾಸಜೀ ಸ್ವಾಮೀಜಿಯವರ ಸ್ಮರಣೋತ್ಸವದ ಅಂಗವಾಗಿ ಕಳೆದ ವಾರ ಏರ್ಪಾಡಾಗಿದ್ದ 'ತಿರುಕನೂರಿನಲ್ಲಿ ರಂಗದಾಸೋಹ'ದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.



'ಜನರನ್ನು ಅಲ್ಪವಾದ ಸ್ವಾರ್ಥ ಪ್ರಪಂಚ ದಿಂದ ಹೊರಗೆಳೆದು ಮಹಾಪುರುಷರ ದೊಡ್ಡ ಬಾಳಿನ ನಿಸ್ವಾರ್ಥ ನಡೆಗಳ ಬಗ್ಗೆ ನಾಟಕಗಳು ತಿಳಿಸುವಂತಿರಬೇಕು' ಎಂದು ಭಾರತದ ಪ್ರಾಚೀನ ನಾಟಕಕಾರರ ಅಭಿಪ್ರಾಯವಾಗಿದ್ದು ಹಾಗೆಯೇ 'ನಾಟಕಗಳು ಮನುಷ್ಯನ ಚಾರಿತ್ರ ಶುದ್ಧಿಗೆ ಕಾರಣವಾಗಬೇಕು' ಎಂದು ಪ್ಲೇಟೋ, ಅರಿಸ್ಟಾಟಲ್ ಮುಂತಾದ ತತ್ವಜ್ಞಾನಿಗಳು ಹೇಳಿದ್ದಾರೆ. ಈ ಮಾತುಗಳು ಇಂದಿಗೂ ಪ್ರಸ್ತುತವಾಗಿದ್ದು ಮನರಂಜನೆಯೊಂದಿಗೆ ಮನಃ ಪರಿವರ್ತನೆಗೂ ಕಾರಣವಾಗಬಲ್ಲ ನಾಟಕಗಳು ಇಂದು ಅವಶ್ಯವಾಗಿದೆ ಎಂದರು.

ಜ್ಞಾನದಾಸೋಹ, ಅನ್ನದಾಸೋಹ, ಆರೋಗ್ಯ ದಾಸೋಹ, ಸಾಹಿತ್ಯ ದಾಸೋಹ, ಯೋಗ ದಾಸೋಹಗಳೊಂದಿಗೆ ರಂಗ ದಾಸೋಹಕ್ಕೂ ಬ್ರಹ್ಮೀ ಭೂತ ರಾಘವೇಂದ್ರ ಸ್ವಾಮಿಗಳವರು ಗಮನ ಕೊಟ್ಟಿದ್ದರು. ಸ್ವಾಮಿಗಳು ಬ್ರಹ್ಮೀಭೂತರಾದ ನಂತರವೂ 21 ವರ್ಷಗಳಿಂದ ನಿರಂತರ ರಂಗ ದಾಸೋಹ ಇಲ್ಲಿ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿದ್ದ ಚಿತ್ರದುರ್ಗದ ಮಾಜಿ ಸಂಸದ ಬಿ.ಎಂ.ಚಂದ್ರಪ್ಪ ಮಾತನಾಡಿ, ಪೂಜ್ಯ ರಾಘವೇಂದ್ರ ಸ್ವಾಮಿಗಳ ಬದುಕೆ ಸಮಾಜಕ್ಕೆ ಸಂದೇಶ ಹಾಗೂ ಭೂಮಿಗೆ ಶಕ್ತಿಯಾಗಿದೆ ಎಂದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಮಾಜಿ ಸಚಿವ ಹೆಚ್.ಆಂಜನೇಯ ಮಾತನಾಡಿ, ಆಶ್ರಮದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಅಗತ್ಯ ನೆರವು ಒದಗಿಸಿಕೊಡುವಲ್ಲಿ ಸರ್ಕಾರದೊಂದಿಗೆ ಸಂಪರ್ಕಿಸುವುದಾಗಿ ಹೇಳಿದರು.

ಟ್ರಸ್ಟಿನ ಉಪಾಧ್ಯಕ್ಷರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಆದ ಸಾಹಿತಿ ರಾಘವೇಂದ್ರ ಪಾಟೀಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಟ್ರಸ್ಟಿನ ಕಾರ್ಯದರ್ಶಿ ಎಸ್.ಕೆ.ಬಸವರಾಜನ್, ಚಲನಚಿತ್ರ ನಿರ್ದೇಶಕ ರಾಧಾಕೃಷ್ಣ ಪಲ್ಲಕ್ಕಿ, ಆಶ್ರಮದ ಹಳೆಯ ವಿದ್ಯಾರ್ಥಿಗಳಾದ ವಿಜ್ಞಾನಿ ಡಾ.ನಾಗೇಶ್ ಕಿಣಿ, ಡಾ. ಪಿ.ಎನ್. ಶಾಂತಕುಮಾರ್, ಹೆಚ್. ಎಂ.ಸನತ್ ಕುಮಾರ್, ವಿಶ್ವಸ್ಥರಾದ ಕೆ.ಡಿ.ಬಡಿಗೇರ್, ಎಲ್.ಎಸ್.ಶಿವರಾಮಯ್ಯ, ವ್ಯವಸ್ಥಾಪಕ ಡಿ.ಕೆ. ಚಂದ್ರಪ್ಪ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಹೆಚ್. ಗಿರೀಶ್ ಮಾಡಿದರೆ, ಯೋಗ ನಮನ ಪ್ರಸ್ತುತಿಯನ್ನು ಸಂತೋಷ್ ಕುಮಾರ್ ನಿರೂಪಿಸಿದರು. ಜಿ.ಟಿ.ಶಂಕರಮೂರ್ತಿ ಸ್ವಾಗತಿಸಿದರು. ಜಿ.ಎಸ್.ಶಿವಕುಮಾರ್ ವಂದಿಸಿದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ ನಾಟಕ ಬೆಪ್ಪುತಕ್ಕಡಿ ಬೋಳೇಶಂಕರವನ್ನು ಮಲ್ಲಾಡಿ ಹಳ್ಳಿಯ ತಿರುಕರಂಗ ಸಾಂಸ್ಕೃತಿಕ ವೇದಿಕೆಯ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು. ಸಂಗೀತ ಮತ್ತು ನಿರ್ದೇಶನವನ್ನು ಎಂಪಿಎಂ ವೀರೇಶ್ ಮಾಡಿದರು.

# ಮಹಿಳಾ ಹೋರಾಟಕ್ಕೆ ಪೂರಕವಾದ ಸಾಂಸ್ಕೃತಿಕ ಚಳವಳಿ ಅಗತ್ಯವಿದೆ

### ಮಹಿಳಾ ಸಮ್ಮೇಳನದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮದಲ್ಲಿ ಬಿ.ಟಿ ಜಾಹ್ನವಿ ಅಭಿಮತ

ದಾವಣಗೆರೆ,ಜ.18- ಮಹಿಳಾ ಹೋರಾಟಗಳಿಗೆ ಪೂರಕವಾದ ಸಾಂಸ್ಕೃತಿಕ ಚಳವಳಿಯ ಅಗತ್ಯವಿದೆ, ಮೌಲ್ಯ ಮತ್ತು ನೀತಿಗಳನ್ನು ಹೃದಯದಲ್ಲಿ ನೆಲೆಗೊಳಿಸುವ ಕೆಲಸವನ್ನು ಸಾಹಿತ್ಯ, ಮುಂತಾದ ಕಲಾಪ್ರಕಾರಗಳು ಮಾಡುತ್ತವೆ ಎಂದು ಹಿರಿಯ ಬರಹಗಾರರಾದ ಬಿ.ಟಿ.ಜಾಹ್ನವಿ ಅಭಿಪ್ರಾಯಿಸಿದರು.

ನಗರದಲ್ಲಿ ಜರುಗಿದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ 7 ನೇ ರಾಜ್ಯ ಮಹಿಳಾ ಸಮ್ಮೇಳನದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಂಡಾಯ ಸಾಹಿತಿ ಕಲೀಂ ಭಾಷಾ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.

ಎಸ್‌ಯುಸಿಐ (ಸಿ) ಪಕ್ಷದ ಪಾಲಿಟ್ ಬ್ಯುರೋ ಸದಸ್ಯ ಕೆ.ರಾಧಾಕೃಷ್ಣ ಮಾತನಾಡಿ, ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಸಾಕಷ್ಟು ಮಾತನಾಡುತ್ತಾರೆ, ಲೇಖನಗಳನ್ನು ಬರೆಯುತ್ತಾರೆ. ನಾವು ನಾಯಕರನ್ನು ಆರಾಧನೆ ಮಾಡುತ್ತೇವೆ. ಆದರೆ ಇದಾವುದರಿಂದಲೂ ಮಹಿಳೆಯರ ಸಮಸ್ಯೆ ಬಗೆಹರಿದಿಲ್ಲ. ನಾವು ರಾಜಕೀಯವಾಗಿ ಸ್ವತಂತ್ರವಾಗಿದ್ದೇವೆ. ಆದರೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ವಾತಂತ್ರ್ಯ ದೊರಕಿದೆಯೇ? ಇದನ್ನು ಗಹನವಾಗಿ ಆಲೋಚಿಸಬೇಕು ಎಂದರು.

ನಮ್ಮ ಸಮಾಜದಲ್ಲಿನ್ನೂ ಜಾತಿ ಪದ್ಧತಿಯಿದೆ. ಬುದ್ಧನಿಂದ ಆರಂಭವಾಗಿ ಗಾಂಧಿ, ಮುಂತಾದವರೂ ಇದರ ವಿರುದ್ಧ ಧ್ವನಿಯೆತ್ತಿದ್ದಾರೆ. ಆದರೂ ಸಮಸ್ಯೆಗಳು



ಕೊನೆಯಾಗಿಲ್ಲ. ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯಲ್ಲಿ ಮಹಿಳೆಯರ ವಿಮುಕ್ತಿ ಅಡಗಿದೆ. ಅದಕ್ಕೆ ಮಹಿಳೆಯರು ತಯಾರಾಗಬೇಕು ಎಂದು ಅವರು ಕರೆ ನೀಡಿದರು.

ಅಖಿಲ ಭಾರತ ಅಧ್ಯಕ್ಷ ಕೆಯಾ ಡೇ ಮಾತನಾಡಿ ಭಾರತ ಬಡತನದ ದೇಶ. ಮಹಿಳೆಯರ ಜೀವನ ಶೋಚನೀಯವಾಗಿದೆ. ಅವರಿಗೆ ಸಮಾನ ಹಕ್ಕುಗಳು ಲಭಿಸಿಲ್ಲ. ಅವರು ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತರಾಗಬೇಕು. ಅದಕ್ಕಾಗಿ ಮಹಿಳೆಯರು ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ನಂತರ ನೂತನ ರಾಜ್ಯ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎಂ.ಎನ್. ಮಂಜುಳಾ, ಕಾರ್ಯದರ್ಶಿಯಾಗಿ ಎಸ್.ಶೋಭಾ, ಉಪಾಧ್ಯಕ್ಷರಾಗಿ ಡಾ. ಮೇರಿ ಜಾನ್, ಹರಿಣಿ ಆಚಾರ್ಯ, ಸೀಮಾ ಜಿ.ಎಸ್, ಹೇಮಾವತಿ ಕೆ, ಭಾಗ್ಯಲಕ್ಷ್ಮಿ ಬಿ.ಎಸ್, ಗುಂಡಮ್ಮ ಆರ್.ಗೀತಾ, ಅಲಕಾ ರಾವ್ ಜಂಟಿ ಕಾರ್ಯದರ್ಶಿಗಳಾಗಿ ಮಧುಲತಾ ಗೌಡರ್, ಕಲ್ಯಾಣಿ ಎಂ.ವಿ, ಅನುರಾಧ ನಾಯರ್, ನಿರ್ಮಲ ಹೆಚ್.ಎಲ್, ವಿಜಯಲಕ್ಷ್ಮಿ, ರುಕ್ಮಿಣಿ ಆರ್, ಜ್ಯೋತಿ, ಭಾರತಿ, ಶಿವಬಾಳಮ್ಮ, ಗಂಗಾ, ಬನಶ್ರೀ, ರತ್ನಮ್ಮ, ಸೌಮ್ಯ, ಅಭಿಲಾಷ, ಆಸಿಯಾ, ಈಶ್ವರಿ ಮತ್ತು ಖಜಾಂಚಿಯಾಗಿ ಎ.ಶಾಂತ ಆಯ್ಕೆಯಾಗಿದ್ದಾರೆ.

# ಫೆ.12ರಿಂದ ವಿಧಾನ ಮಂಡಲ ಜಂಟಿ ಅಧಿವೇಶನ ಆರಂಭ

ಬೆಂಗಳೂರು, ಜ. 18 - ಫೆಬ್ರವರಿ 12 ರಂದು ವಿಧಾನಮಂಡಲದ ಜಂಟಿ ಅಧಿವೇಶನ ನಡೆಯಲಿದ್ದು, ಫೆ. 16 ರಂದು ಬಜೆಟ್ ಮಂಡನೆ ಆಗಲಿದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಸಂಪುಟ ಸಭೆಯ ನಂತರ ಮಾತನಾಡಿದ ಅವರು, ಫೆ. 23ರವರೆಗೆ ಉಭಯ ಸದನಗಳ ಅಧಿವೇಶನ ನಡೆಯಲಿದೆ ಎಂದರು.

ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಶಿಫಾರಸು ಮಾಡಲು ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ.

ಶಿವಮೊಗ್ಗದ ಹಳೇ ಜೈಲು ಆವರಣದ ಉದ್ಯಾನವನಕ್ಕೆ ಅಲ್ಲಮಪ್ರಭು ಹೆಸರು ನಾಮಕರಣಕ್ಕೆ ನಿರ್ಣಯಿಸಲಾಯಿತು. ಬೆಳಗಾವಿಯ ಕಿತ್ತೂರು ತಾಲೂಕಿನ ಹೆಸರನ್ನು ಚೆನ್ನಮ್ಮನ ಕಿತ್ತೂರು ಎಂದು ನಾಮಕರಣ ಮಾಡಲು ನಿರ್ಧಾರ ಮಾಡಲಾಯಿತು ಎಂದರು.

ಕರ್ನಾಟಕ ವಿದ್ಯುತ್ ನಿಗಮದ 4,430 ಕೋಟಿ ರೂ. ಸಾಲಕ್ಕೆ ಸರ್ಕಾರಿ ಖಾತರಿ ನೀಡಲು ಸಂಪುಟ ಸಭೆ ನಿರ್ಣಯ ಕೈಗೊಂಡಿದೆ. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಸಮಗ್ರ ವಿ.ವಿ. ಮತ್ತು ಕಾಲೇಜು ನಿರ್ವಹಣಾ ತಂತ್ರಾಂಶ 15.13 ಕೋಟಿ ರೂ. ವೆಚ್ಚದಲ್ಲಿ ಸಿದ್ಧಪಡಿಸಿ ಅನುಷ್ಠಾನಕ್ಕೆ ಸಂಪುಟ ಒಪ್ಪಿಗೆ ನೀಡಿದ್ದು, 30 ಸೀಟರ್ ಕಾಲ್ ಸೆಂಟರ್ ಸ್ಥಾಪನೆಗೆ ಸಮ್ಮತಿಸಲಾಗಿದೆ.

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ವಿಧೇಯಕ 2024 ಕ್ಕೆ ಅನುಮೋದನೆ ನೀಡಿದೆ. ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸ್ಕ್ರ್ಯಾಪಿಂಗ್ ನೀತಿಯ ಕ್ರಮ ಸಂಖ್ಯೆ 9ನ್ನು ಪರಿಷ್ಕರಣೆಗೆ ಅನುಮೋದನೆ ನೀಡಲಾಗಿದೆ ಎಂದು ಸಚಿವರು ಹೇಳಿದರು.

# ದಕ್ಷಿಣ ಸಂಚಾರ ಪೊಲೀಸರಿಂದ ರಸ್ತೆ ಸುರಕ್ಷಾ ಸಪ್ತಾಹ : ನಟ ಚಿಕ್ಕಣ್ಣ ಚಾಲನೆ



ದಾವಣಗೆರೆ, ಜ.18- ರಸ್ತೆ ಸುರಕ್ಷಾ ಸಪ್ತಾಹ 2024ರ ಅಂಗವಾಗಿ ನಗರದ ದಕ್ಷಿಣ ಸಂಚಾರ ಪೊಲೀಸರು, ಸಂಚಾರ ನಿಯಮಗಳ ಪಾಲನೆ ಜಾಗೃತಿ ಬಗ್ಗೆ ನೆಹರು ಯುವ ಕೇಂದ್ರ, ಸಮಾಜ ಕಾರ್ಯ ಅಧ್ಯಯನ ವಿಭಾಗ ದಾವಣಗೆರೆ ವಿವಿ ವಿದ್ಯಾರ್ಥಿಗಳ ಸಹಯೋಗದಲ್ಲಿ ರಸ್ತೆ ಸುರಕ್ಷಾ ಸಪ್ತಾಹ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಚಿತ್ರ ನಟ ಚಿಕ್ಕಣ್ಣ ಮಾತನಾಡಿ, ಎಲ್ಲಾ ವಾಹನ ಸವಾರರು ರಸ್ತೆ ಸುರಕ್ಷಾ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ದಕ್ಷಿಣ ಸಂಚಾರ ಪಿಎಸ್‌ಐ ಶ್ರೀಮತಿ ಶೈಲಜಾ, ಮಾಜಿ ಮೇಯರ್ ಅಜಯ್‌ಕುಮಾರ್ ಹಾಗೂ ಪೊಲೀಸ್ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೆ.ಎನ್.ಹಳ್ಳಿಯಲ್ಲಿ ಅರಿಶಿನ, ಕುಂಕುಮ, ಬಳೆ, ಮಂತ್ರಾಕ್ಷತೆ ವಿತರಣೆ

ಮಲೇಬೆನ್ನೂರು, ಜ. 18- ಕಡರನಾಯಕನಹಳ್ಳಿ ಗ್ರಾಮದಲ್ಲಿ ಮುಸ್ಲಿಂ ಮಹಿಳೆಯರಿಗೂ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಉದ್ಘಾಟನೆಯ ಆಮಂತ್ರಣ ಪತ್ರಿಕೆ ಮತ್ತು ಮಂತ್ರಾಕ್ಷತೆಯ ಜೊತೆಗೆ ಅರಿಶಿನ, ಕುಂಕುಮ, ಬಳೆಗಳನ್ನು ನೀಡಲಾಯಿತು. ಗ್ರಾ.ಪಂ ಅಧ್ಯಕ್ಷ ಜಿ. ಮಂಜುನಾಥ್, ಗುರುರಾಜ್ ಆಚಾರ್, ಗೋಪಾಲ್, ಅಶೋಕ್, ಪವನ್ ಕುಮಾರ್, ಕಿರಣ್, ಫೋಟೋ ಮಾರುತಿ ಹಾಗೂ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಮತ್ತು ಸ್ವಯಂ ಸೇವಕರು ಕರಪತ್ರ ಹಾಗೂ ಮಂತ್ರಾಕ್ಷತೆ ವಿತರಣೆಯಲ್ಲಿ ಭಾಗವಹಿಸಿದ್ದರು.



# ಕೆರೆಗೆ ಹರಿಯಿತು ನೀರು, ಏರಿತು ಜಮೀನು, ಸೈಟು ಬೆಲೆ ಗಗನಕ್ಕೆ..!

**ಬಿ.ಜಿ. ಅನಂತಪದ್ಮನಾಭ ರಾವ್**



## ಹಲಸಿಗೆ ಹೆಸರುವಾಸಿಯಾಗಿದ್ದ ಭರಮಸಾಗರ ಈಗ ಅಡಿಕೆಯ ನಾಡು

ಕಳೆದ 30 ವರ್ಷಗಳಿಂದ ಭರಮಸಾಗರದ ಎರಡು ಕೆರೆಗಳು ಬತ್ತಿ, ಅಲ್ಲಿ ಜಾಲಿ ಬೆಳೆದು ಪರಿಸರವೇ ಹಾಳಾಗಿತ್ತು. ಜನರು ಈ ಕೆರೆಯಲ್ಲಿ ಬೇಡವಾದ ವಸ್ತುಗಳನ್ನು ಹಾಕುತ್ತಿದ್ದರು. ಹಾಗಾಗಿ ಕೆರೆಯ ಅಂದ ಚಂದವೇ ಹಾಳಾಗಿ ಹೋಗಿತ್ತು. ಜಮೀನುಗಳಿಗೆ ಮಣ್ಣನ್ನು ಇಲ್ಲಿಂದಲೇ ತೆಗೆದು ಕೊಂಡು ಹೋಗಲಾಗುತ್ತಿತ್ತು.

ಈಚೆಗೆ ಸರ್ಕಾರ ಕೆರೆಗಳ ಅಭಿವೃದ್ಧಿ ಹಾಗೂ ಏತ ನೀರಾವರಿ ಯೋಜನೆಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವ ಬೃಹತ್ ಯೋಜನೆಯನ್ನು, ಸಿರಿಗೆರೆ ಶ್ರೀಗಳವರ ಆಶೀರ್ವಾದದಿಂದ ಈ ಕಾರ್ಯಕ್ಕೆ ನಾಂದಿಯಾಯಿತು. ಇದರ ಪ್ರಕಾರ ಕೆರೆಗೆ ನೀರು ತರುವ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇಂಜಿನಿಯರ್‌ಗಳಿಂದ ಪ್ಲಾನ್ ಹಾಕಿಸಿದರು. ಶಾಸಕ ಎಂ. ಚಂದ್ರಪ್ಪನವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಬೇರೆ ಯಾವುದೇ ಅಧಿಕಾರಕ್ಕೆ ಆಸೆ ಪಡಬೇಡ, ರೈತರುಗಳಿಗೆ ನೀರು ತರುವ ಯೋಜನೆಯ ಕೆಲಸವನ್ನು ಶ್ರಮವಹಿಸಿ ಮಾಡಬೇಕೆಂದು ಹೇಳಿದರು.

ಅದರಂತೆ ಶಾಸಕರು, ಗುರುಗಳ ಮಾತಿಗೆ ಮನ್ನಿಸಿ ಸರ್ಕಾರದಲ್ಲಿ ಹಗಲು, ರಾತ್ರಿ ಎನ್ನದೆ ಕೆಲಸವನ್ನು ಮಾಡಿ ಅದನ್ನು ನಿಭಾಯಿಸಿದರು. ಭರಮಸಾಗರ ಕೆರೆಗೆ ತುಂಗಭದ್ರಾ ನಾಲೆಯಿಂದ ಸುಮಾರು 55 ಕಿಮೀ ದೂರದಿಂದ ಪೈಪ್ ಲೈನ್ ಮೂಲಕ ಕರ್ನಾಟಕದಲ್ಲಿ ಎಲ್ಲೂ ಮಾಡದ ಕೆಲಸವನ್ನು ಇಂಜಿನಿಯರ್ ಪ್ರಕಾಶ್ ಗುಗ್ಗೆ ಮಾಡಿಸಿದರು. ಈ ಪೈಪ್ ಹಾಕುವಾಗ ಮನೆ ಹಾಗೂ ಕೆಲವು ಕಡೆಯಲ್ಲಿ ತರಲೆ ಮಾಡಿದರು. ಶ್ರೀಗಳ ಆಶೀರ್ವಾದದಿಂದ ಸಂಬಂಧಪಟ್ಟವರಿಗೆ ಪರಿಹಾರವನ್ನು ಸರ್ಕಾರದಿಂದ ಕೊಡಿಸುವ ಪ್ರಾಮಾಣಿಕ ಕೆಲಸ ಮಾಡುವಲ್ಲಿ ಯಶಸ್ವಿಯಾದರು.

ಈ ಎಲ್ಲಾ ಕೆಲಸಗಳು ಮುಗಿದ ನಂತರ ಭರಮಸಾಗರದ ಭರಮಣ್ಣ ನಾಯಕ ನಿರ್ಮಿಸಿದ ಕೆರೆಗೆ ಸೆಪ್ಟಂಬರ್ 29ರಂದು ನೀರು ಹರಿದು ಬಂದಿತು. ಶ್ರೀಗಳ ಬೃಹತ್ ಪ್ರಯತ್ನ ಹಾಗೂ ಆಶೀರ್ವಾದ ಹಾಗೂ ಮಾರ್ಗದರ್ಶನವನ್ನು ರೈತರು ಗ್ರಾಮದ ಪರವಾಗಿ ಭರಮಸಾಗರ ಗ್ರಾಮಸ್ಥರ ಸಹ ಸಹಯೋಗದಿಂದ ಶ್ರೀಗಳವರಿಗೆ ಗೌರವ ಸಮರ್ಪಣೆಯನ್ನೂ ಸಹ ಮಾಡಿರುತ್ತಾರೆ.

ಕೆರೆಗೆ ನೀರು ಬಂದ ನಂತರ ಭರಮಸಾಗರದ ಇತಿಹಾಸವೇ ಬದಲಾಗಿದೆ. ಈ ಬಾರಿ ತರಳಬಾಳು ಹುಣ್ಣಿಮೆಯನ್ನು ಭರಮಸಾಗರದಲ್ಲಿ ತುಂಬಾ ಅದ್ದೂರಿಯಿಂದ ನಡೆಸಬೇಕೆಂದು ಶ್ರೀಗಳು ಕಳೆದ ವರ್ಷವೇ ತಿಳಿಸಿದ್ದರು. ಆದರೆ ಈ ಬಾರಿ ಮಳೆ ಇಲ್ಲದೆ ಬರಗಾಲ ಹಾಗೂ ರೈತರು ತುಂಬಾ ಕಷ್ಟದಲ್ಲಿರುವುದರಿಂದ ಸಿರಿಗೆರೆಯಲ್ಲಿಯೇ ಸರಳವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಇನ್ನು ಜಮೀನು ಹಾಗೂ ಸೈಟ್ ವಿಚಾರಕ್ಕೆ ಬಂದರೆ ಬೆಲೆ ಭಾರೀ ಏರಿಕೆ ಆಗಿದೆ. ಕಾರಣ ಮಕ್ಕಳ ವಿದ್ಯಾಭ್ಯಾಸ, ಅಡಿಕೆ ತೋಟ, ಅಲ್ಲದೆ ದೊಡ್ಡ ಪ್ರಮಾಣದಲ್ಲಿ ವ್ಯವಹಾರವನ್ನು ಮಾಡಲು ಬಹಳ ಚೆನ್ನಾಗಿ ಇದೆಯೆಂದು ಸುತ್ತಮುತ್ತಲಿನ ಹಳ್ಳಿಯ ಜನರೂ ಭರಮಸಾಗರಕ್ಕೆ ಬರುತ್ತಿದ್ದಾರೆ. ಜಮೀನಿಗೆ ಕೆರೆ ನೀರು ಬರುವುದಕ್ಕೆ ಮುಂಚೆ ಒಂದು ಎಕರೆಗೆ 8-10 ಲಕ್ಷ ಇತ್ತು. ಈಚೆಗೆ 25- 30 ಲಕ್ಷವಾಗಿದೆ. ಸೈಟ್ 2, 3, 5 ಸಾವಿರ ತನಕ ಅಡಿ ಲೆಕ್ಕದಲ್ಲಿದೆ. ಅದೇ ಜಮೀನು ಎನ್‌ಹೆಚ್-4ರ ಪಕ್ಕದಲ್ಲಿ 1 ಗುಂಟೆಗೆ 6-8 ಲಕ್ಷವಾಗಿರುತ್ತದೆ. ಇದೇ ರೀತಿ ವ್ಯವಹಾರವು ನಡೆಯುತ್ತಿದೆ.

ಅಡಿಕೆ ತೋಟ ಮಾಡಲು ಹೋದರೆ, ಎಕರೆಗೆ ನೀರು, ಕರೆಂಟ್, ಬೇಲಿ ವ್ಯವಸ್ಥೆ ಮಾಡಿಕೊಳ್ಳಲು 2-3 ಲಕ್ಷ ಖರ್ಚಾಗುತ್ತದೆ. ಅಲ್ಲದೆ ಕೆಲವು ರೈತರು ಅಡಿಕೆ ಸಸಿ ಮಾರಾಟ ಮಾಡುವುದನ್ನೇ ಉದ್ಯೋಗ ಮಾಡಿಕೊಂಡಿದ್ದಾರೆ. 25 ರಿಂದ 40 ರೂಪಾಯಿ ತನಕ ಸಸಿಯನ್ನು ಮಾರಾಟ ಮಾಡುತ್ತಿದ್ದಾರೆ. ಕೂಲಿಕಾರರು ಸಮಸ್ಯೆ ಇದ್ದರೂ ಸಹ ತೋಟ ಮಾಡುವುದನ್ನು ಬಿಟ್ಟಿಲ್ಲ.

ಅಡಿಕೆ ಕೇಣಿ ಮಾಡುವವರು ಸ್ವಂತ ಕಾರಿನಲ್ಲಿ ಓಡಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಭರಮಸಾಗರದಲ್ಲಿ ಅಡಿಕೆ ಸುಲಿಯುವ ಮಿಷನ್ ಜಾಗ ಆವರಿಸಿಕೊಂಡಿರುವುದನ್ನು ನೋಡಿದರೆ ಒಂದು ಸಣ್ಣ ಕೈಗಾರಿಕೆಯಂತೆ ನಡೆಯುತ್ತಿದೆ. ಹಲಸಿಗೆ ಹೆಸರುವಾಸಿಯಾಗಿದ್ದ ಭರಮಸಾಗರವೀಗ ಅಡಿಕೆಗೆ ಹೆಸರಾಗಿದೆ. ಸುಮಾರು ಈ 6-7 ವರ್ಷದಲ್ಲಿ ನಾಲ್ಕು ಕಡೆ ತಿರುಗಿ ನೋಡಿದರೂ ಅಡಿಕೆ ತೋಟಗಳೇ ಕಾಣುತ್ತವೆ, ಇನ್ನು ಎಲ್ಲಾ ಈ ಭಾಗವು ಅಭಿವೃದ್ಧಿಯಾಗುವುದಕ್ಕೆ ಸಿರಿಗೆರೆ ಶ್ರೀಗಳ ಆಶೀರ್ವಾದವೇ ಕಾರಣ.

ಕೆರೆಗೆ ನೀರು ಬರುವುದರ ಮುಂಚೆ ಬೋರ್ ಒಂದು ಸಾವಿರ ಅಡಿ ತೆಗೆಸಿದರೂ ನೀರು ಬರುತ್ತಿರಲಿಲ್ಲ. ಕೆರೆಗೆ ನೀರು ಬಂದ ಮೇಲೆ ಭರಮಸಾಗರ ಹಾಗೂ ಸುತ್ತಮುತ್ತಲಿನ ಹಳ್ಳಿಯ ರೈತರ ಬೋರ್‌ಗಳು ಚೆನ್ನಾಗಿದೆ 400 ರಿಂದ 500 ಅಡಿಗೆ ನೀರು ಸಿಗುತ್ತಿದೆ.

ಈ ಭಾಗದ ರೈತರು ತಮ್ಮ ಮನೆಗಳಲ್ಲಿ ಸಿರಿಗೆರೆ ಶ್ರೀಗಳವರ ಫೋಟೋವನ್ನು ಹಾಕಿಕೊಳ್ಳಬೇಕು. ಭರಮಸಾಗರ ಡ್ಯಾಮ್ ಅಥವಾ ಭರಮಸಾಗರ ತೀರ್ಥಕ್ಷೇತ್ರ ಎಂದು ಸಹ ಅವರು ನಾಮಕರಣ ಮಾಡಿದ್ದಾರೆ. ಕೆರೆಯಲ್ಲಿ ಕಸ ಇತರೆ ತ್ಯಾಜ್ಯ ವಸ್ತುಗಳನ್ನು ಹಾಕದಂತೆ ನೋಡಿಕೊಳ್ಳಬೇಕು.

ಇದೇ ರೀತಿ ಶ್ರೀಗಳಿಗಿದ್ದ ಭರಮಸಾಗರದ ಮೇಲಿನ ಅಭಿಮಾನ ಹಿನ್ನೆಲೆಯಲ್ಲಿ ಮುಂದಿನ ಬಾರಿ ತರಳಬಾಳು ಹುಣ್ಣಿಮೆಯನ್ನು ಭರಮಸಾಗರ ದಲ್ಲಿಯೇ ನೆರವೇರಿಸಬೇಕು ಮತ್ತು ಭರಮಸಾಗರ ತಾಲೂಕು ರಚನೆಯಾಗಲು ಶ್ರೀಗಳವರು ಆಶೀರ್ವಾದ ಮಾಡಬೇಕೆಂದು ಈ ಭಾಗದ ಜನರ ಆಸೆಯಾಗಿದೆ.

# ಕರ್ನಾಟಕದ ಸಾಂಸ್ಕೃತಿಕ ನಾಯಕರಾಗಿ ಬಸವಣ್ಣ

**(1ನೇ ಪುಟದಿಂದ)** ಅಪೇಕ್ಷೆಯೂ ಆಗಿತ್ತು. ಸ್ವಾಮಿಗಳ ಈ ಬೇಡಿಕೆಯನ್ನು ಈಡೇರಿಸಿದ ತೃಪ್ತಿ ನಮ್ಮ ಸರ್ಕಾರಕ್ಕೆ ಇದೆ. ಈ ಎಲ್ಲ ಸ್ವಾಮೀಜಿಗಳ ಆಶೀರ್ವಾದ ನಮ್ಮ ಸರ್ಕಾರದ ಮೇಲೆ ಇರಲಿ ಎಂದು ಇದೇ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಎಂದವರು ಹೇಳಿದ್ದಾರೆ.

ವೈಯಕ್ತಿಕವಾಗಿ ಮತ್ತು ರಾಜಕೀಯವಾಗಿ ಬಸವಣ್ಣ ನನ್ನ ವೈಚಾರಿಕ ಗುರು. ಬಸವ ಜಯಂತಿಯ ದಿನವೇ ನಾನು ಮೊದಲ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದೆ. ಆ ನಿರ್ಧಾರ ಕಾಕತಾಳೀಯವಲ್ಲ, ಉದ್ದೇಶಪೂರ್ವಕವಾದುದು. ಆ ದಿನ ಬಸವಣ್ಣನವರ ಚಿಂತನೆಗಳ ಹಾದಿಯಲ್ಲಿ ನಡೆಯುತ್ತೇನೆ ಎಂದು ನನ್ನ ಮನಸ್ಸಿನೊಳಗೆ ಪ್ರಮಾಣ ಮಾಡಿದ್ದೆ. ಅದರಂತೆ ಬಸವಣ್ಣನವರ ತತ್ವದ ದಾರಿಯಲ್ಲಿಯೇ ನಮ್ಮ ಸರ್ಕಾರ ಈಗಲೂ ಸಾಗುತ್ತಿದೆ. ಈ ಜಾಗೃತಿ ನಮ್ಮ ಸರ್ಕಾರದ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇರಬೇಕೆಂಬ ಉದ್ದೇಶದಿಂದಲೇ ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕಬೇಕೆಂದು ಆದೇಶಿಸಿದ್ದೇನೆ ಎಂದು ತಿಳಿಸಿದ್ದಾರೆ.

ಬಸವಣ್ಣ ಎಂಬ ಜ್ಞಾನಭಂಡಾರದ ಮಾರ್ಗದರ್ಶನ ಇಲ್ಲದೆ ಇದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ ಎಂದಿರುವ ಸಿದ್ದರಾಮಯ್ಯ, ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆಯನ್ನಷ್ಟೇ ಮಾಡಿ ನಾವು ವಿರಮಿಸುವುದಿಲ್ಲ. ಬಸವ ತತ್ವವನ್ನು ಮನೆಮನೆಗೆ ತಲುಪಿಸುವ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುತ್ತೇವೆ. ಸಮಸಮಾಜ ನಿರ್ಮಾಣದ ಬಗ್ಗೆ ಬಸವಣ್ಣ ಕಂಡ ಕನಸನ್ನು ಸಾಕಾರಗೊಳಿಸಲು ಎಲ್ಲರ ಸಹಕಾರ ಇರಲಿ ಎಂದು ಕೇಳಿಕೊಂಡಿದ್ದಾರೆ.

# ಅಂಟಿರದ, ದಂಟು ಕಡಿಮೆಯ ಹಲಸು

**(1ನೇ ಪುಟದಿಂದ)** ಬೆಳೆದಿರುವ 'ಕನಕ' ಎಂಬುದು ಜನವರಿಯಲ್ಲೇ ಫಲ ನೀಡುತ್ತಿದೆ. ಇದರಲ್ಲಿ ಅಂಟು - ದಂಟು ಎರಡೂ ಕಡಿಮೆ. ಹಣ್ಣಿನ ಋತುವಿಗೆ ಮುಂಚೆ ಹಾಗೂ ನಂತರದಲ್ಲೂ ಹಣ್ಣು ನೀಡುವ ತಳಿಗಳನ್ನು ಇಲ್ಲಿ ಬೆಳೆಯಲಾಗಿದೆ ಎಂದು ದೇವರಾಜ್ ತಿಳಿಸಿದರು.

ರುದ್ರಾಕ್ಷಿ ಎಂಬ ತಳಿಯು ದುಂಡನೆ ಗಾತ್ರದಲ್ಲಿ ಹಣ್ಣು ನೀಡುತ್ತದೆ. ಇದಲ್ಲದೇ, ಸರ್ವ ಋತು ವಿಜಯ ಹಾಗೂ ಸರ್ವ ಋತು ಸದಾನಂದ, ಅಂಟು ರಹಿತ ಲೈಟ್, ಲಾಲ್‌ಬಾಗ್ ಮಧುರ, ಬೈರಚಂದ್ರ, ಪ್ರಕಾಶ್ ಚಂದ್ರ, ಮಂಕಾಲೆ ರೆಡ್, ತುಬ್‌ಗೆರೆ ರೆಡ್, ವರಶ್ರೀ, ಥೈಲ್ಯಾಂಡ್ ಪಿಂಕ್, ಕಮತ್ತಮ್, ಆರ್.ಎಕ್ಸ್. ಸಿಂಧೂರ, ವಾಡಿ, ವಿ 1, ವಿ.ಎಸ್.ಸಿ., ವಾಟ್‌ಹಾರ್, ಸಿಂಹ ಈಪುರ, ಜಿ11, ಹಾಗೂ ಎನ್.ಬಿ. ತಳಿಗಳನ್ನು ಇಲ್ಲಿ ಬೆಳೆಯಲಾಗಿದೆ ಎಂದವರು ಹೇಳಿದರು.

ಮಣ್ಣಿನ ಗುಣದ ಕಾರಣದಿಂದಾಗಿ ಕೆಲ ನಿರ್ದಿಷ್ಟ ಪ್ರದೇಶಗಳಲ್ಲಿ ಬೆಳೆಯುವ ಹಲಸಿನ ರುಚಿ ಹೆಚ್ಚಾಗಿರುತ್ತದೆ. ತಳಿ ಗುಣದ ಕಾರಣದಿಂದಾಗಿ ಎಲ್ಲೇ ಬೆಳೆದರೂ ರುಚಿ ನೀಡುವ ತಳಿಗಳೂ ಇವೆ. ಈ ಹಿನ್ನೆಲೆಯಲ್ಲಿ ಹಲವಾರು ರೀತಿಯ ತಳಿಗಳನ್ನು ಪರೀಕ್ಷಿಸುತ್ತಿರುವುದಾಗಿ ಅವರು ತಿಳಿಸಿದರು.

# ಪರಿಶಿಷ್ಟರ ಒಳಮೀಸಲಾತಿ

**(1ನೇ ಪುಟದಿಂದ)** ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ಒಳ ಮೀಸಲಾತಿ ವರ್ಗೀಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪರಿಶಿಷ್ಟರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಮತ್ತು ಅವರಿಗೆ ದಕ್ಕಬೇಕಾದ ಹಕ್ಕನ್ನು ಒದಗಿಸಿ ಎಂದು ಕೇಂದ್ರದ ಜವಾಬ್ದಾರಿಗೆ ಬಿಟ್ಟಿದೆ. ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳಿದ್ದು, ಕಳೆದ ಜನಗಣತಿಯಂತೆ 1.05 ಕೋಟಿ ಜನಸಂಖ್ಯೆ ಇರುತ್ತದೆ. ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ 17.15 ರಷ್ಟು ಈ ಸಮುದಾಯವಿದ್ದು ಜನಸಂಖ್ಯೆಗೆ ಅನು ಗುಣವಾಗಿ ಒಳ ಮೀಸಲಾತಿ ಕಲ್ಪಿಸಲು ಸಂವಿಧಾನ ತಿದ್ದುಪಡಿ ಮಾಡುವಂತೆ ಸಂಸತ್ತಿಗೆ ಶಿಫಾರಸ್ಸು ಮಾಡಲು ಸಂಪುಟ ಸಭೆ ತೀರ್ಮಾನಿಸಿದೆ.



# ಖುರಷ್ ಪಂದ್ಯಾವಳಿಗೆ ಆಯ್ಕೆ

ದಾವಣಗೆರೆ, ಜ.18- ನಗರದ ಎಸ್.ಎ.ಜಿ.ಬಿ ಪಿಯು ಕಾಲೇಜು ವಿದ್ಯಾರ್ಥಿಗಳಾದ ವೈ. ವಿನಯ್, ಕೆ.ವಿ.ವಿಜಯ್‌ಕುಮಾರ್, ಆರ್. ಮಾಲತೇಶ್, ವಿನಯ್‌ಕುಮಾರ್, ಎಂ.ಪ್ರಶಾಂತ್ ಈ ವಿದ್ಯಾರ್ಥಿಗಳು ಖುರಷ್ ಅಸೋಷಿಯೇಷನ್ ಆಫ್ ಇಂಡಿಯಾದ 11ನೇ ಜೂನಿಯರ್ ನ್ಯಾಷನಲ್ ಖುರಷ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ. ಇದೇ ದಿನಾಂಕ 26 ರಿಂದ 28 ರವರೆಗೆ ರಾಜಸ್ಥಾನದ ಗಂಗಾನಗರದಲ್ಲಿ ಈ ಪಂದ್ಯ ನಡೆಯಲಿದೆ.

# ಕೈದಾಳೆ ಕ್ಯಾಂಪ್‌ನಲ್ಲಿ ಆಹಾರ ಅದಾಲತ್ ಸಾರ ವರ್ಧಿತ ಅಕ್ಕಿ ತಪ್ಪು ಗ್ರಹಿಕೆ ಬೇಡ

ಮಾಯಕೊಂಡ, ಜ. 18 - ಪಡಿತರ ಅಕ್ಕಿಯಲ್ಲಿ ಮೌಲ್ಯವರ್ಧನೆಗಾಗಿ ಸಾರ ವರ್ಧಿತ ಅಕ್ಕಿ ಬೆರಸಲಾಗಿದ್ದು, ನಾಗರಿಕರಿಗೆ ಯಾವುದೇ ಆತಂಕ ಬೇಡ ಎಂದು ಆಹಾರ ನಿರೀಕ್ಷಕ ಜೆ. ನಾಗೇಂದ್ರ ಮಾಹಿತಿ ನೀಡಿದರು.

ಸಮೀಪದ ಕೈದಾಳ್‌ನ ಕ್ಯಾಂಪ್‌ನಲ್ಲಿ ನಡೆದ ಆಹಾರ ಅದಾಲತ್ ಉದ್ಘಾಟಿಸಿ ಅವರು ಮಾತನಾಡಿದರು.

ಪಡಿತರ ಅಕ್ಕಿಯಲ್ಲಿ ಪ್ಲಾಸ್ಟಿಕ್ ಅಕ್ಕಿ ಬೆರೆಸಲಾಗಿದೆ ಎಂದು ಕೆಲವರು ತಪ್ಪು ಸಂದೇಶ ಹರಡುತ್ತಿದ್ದಾರೆ. ಪ್ಲಾಸ್ಟಿಕ್ ಅಕ್ಕಿ ಬೆರೆಸುವ ಯಾವುದೇ ಪ್ರಶ್ನೆಯೇ ಇಲ್ಲ.

ಪೌಷ್ಟಿಕಾಂಶ ಹೆಚ್ಚಿಸಲು ಪ್ರತಿ ಕ್ವಿಂಟಾಲ್ ಅಕ್ಕಿಗೆ ಒಂದು ಕೆಜಿಯಂತೆ ಸಾರವರ್ಧಿತ ಅಕ್ಕಿ ಮಿಶ್ರಣ ಮಾಡಲಾಗುತ್ತದೆ. ಮಧ್ಯಮ ವರ್ಗದ ಜನರಲ್ಲಿ ಪೌಷ್ಟಿಕಾಂಶ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಈ ಬಗ್ಗೆ ಯಾವುದೇ ಸಂಶಯ ಬೇಡ ಎಂದು ಅವರು ಭರವಸೆ ನೀಡಿದರು.

ಗ್ರಾಹಕನಿಗೆ ಯಾವುದೇ ಖರೀದಿಯಲ್ಲಿ ಲೋಪ ಅಥವಾ ಅನ್ಯಾಯವಾದರೆ ಗ್ರಾಹಕರ ವೇದಿಕೆಗೆ ದೂರು ನೀಡುವ ಹಕ್ಕನ್ನು ಹೊಂದಿರುತ್ತಾರೆ ಎಂದು ಮಾಹಿತಿ ನೀಡಿದರು.

ಸರ್ಕಾರ ಪ್ರತಿ ಕೆಜಿಗೆ ಅಕ್ಕಿ 34 ರಂತೆ 170 ನೇರ ನಗದು ನೀಡುತ್ತಿದ್ದು ಸಾರ್ವಜನಿಕರ ಸದ್ಬಳಕೆ ಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಕೈದಾಳ್ ಗ್ರಾಮ ಪಂಚಾಯತಿ ಸದಸ್ಯೆ ಅಶ್ವಿನಿ, ಕಾರ್ಯದರ್ಶಿ ರೇವಣಸಿದ್ದನಗೌಡ, ನ್ಯಾಯಬೆಲೆ ಅಂಗಡಿ ಮಾಲೀಕರಾದ ಮೌನೇಶ್, ಉಮೇಶ್ ಗ್ರಾಹಕರು ಮತ್ತು ಗ್ರಾಮಸ್ಥರು ಇದ್ದರು.

# ಕುಲಾಂತರಿ ಬೆಳೆಗಳಿಂದ ಆಹಾರ ಸುರಕ್ಷತೆ

**(1ನೇ ಪುಟದಿಂದ)** ಅರ್ಜೆಂಟೈನ, ಅಮೆರಿಕ, ಬ್ರೆಜಿಲ್ ಹಾಗೂ ಕೆನಡಾಗಳು ಕುಲಾಂತರಿ ಸೋಯಾಬೀನ್ ಬೆಳೆಯುತ್ತಿವೆ. ವಿಶ್ವದ ಶೇ.80ರಷ್ಟು ಸೋಯಾಬೀನ್ ಕುಲಾಂತರಿಯಾಗಿದೆ. ಭಾರತ ಇದನ್ನೇ ಆಮದು ಮಾಡಿಕೊಳ್ಳುತ್ತಿದೆ ಎಂದು ಮೆಹ್ತ ವಿವರಿಸಿದರು. ಭಾರತ ಕುಲಾಂತರಿ ಬೆಳೆಗಳನ್ನೇ ಆಮದು ಮಾಡಿಕೊಂಡು ಬಳಸುತ್ತಿರುವಾಗ, ಕಲಾಂತರಿ ತಂತ್ರಜ್ಞಾನದ ಬಗ್ಗೆ ಕಳವಳ ಅನಗತ್ಯ. ಕುಲಾಂತರಿ ಬೆಳೆ ತಡೆಯುತ್ತಿರುವುದರಿಂದ ರೈತರು, ಗ್ರಾಹಕರು ಹಾಗೂ ಉದ್ಯಮಗಳಿಗೆ ಹಾನಿಯಾಗುತ್ತಿದೆ ಎಂದವರು ಹೇಳಿದರು.

# ನಿವೃತ್ತ ನೌಕರರ ಕ್ರೀಡಾಕೂಟ

ದಾವಣಗೆರೆ, ಜ.18- ಗಣರಾಜ್ಯೋತ್ಸವದ ಪ್ರಯುಕ್ತ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಕ್ರೀಡಾಕೂಟವನ್ನು ಇದೇ ದಿನಾಂಕ 21ರಂದು ಬೆಳಿಗ್ಗೆ 9 ಗಂಟೆಗೆ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಬಾಪೂಜಿ ಪ್ರೌಢಶಾಲೆ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಕೆ.ಜಿ. ಭರತ್‌ರಾಜ್ ತಿಳಿಸಿದ್ದಾರೆ.


**ಬೇಕಾಗಿದ್ದಾರೆ**
ಬೇಸಿಕ್ ಮತ್ತು ಟ್ಯಾಲಿ ಟೀಚ್ ಮಾಡಲು ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಶನ್
ಎಂ.ಸಿ.ಸಿ. 'ಬಿ' ಬ್ಲಾಕ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.
ಮೊ. 90364 27272

**ಕಾರ್ನರ್ ಸೈಟುಗಳು ಮಾರಾಟಕ್ಕಿವೆ**
ಜಯನಗರ ಮುಖ್ಯ ರಸ್ತೆ ಪೂರ್ವ-ದಕ್ಷಿಣ ಕಾರ್ನರ್ 80x60 ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 40x65, MCC 'A' Block ಪೂರ್ವ-ದಕ್ಷಿಣ , ಕಾರ್ನರ್ 44x60.
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್ ಮಾರಾಟಕ್ಕೆ**
(ಕಮರ್ಷಿಯಲ್ ಆಗುವಂತಹ)
1) 40X60 ಉತ್ತರ 120 ಅಡಿ ರಸ್ತೆಗೆ
2) 40X40 ಪಶ್ಚಿಮ-ದಕ್ಷಿಣ ಕಾರ್ನರ್, 60 ಅಡಿ ರಸ್ತೆ.
ಕಿರಣ್ ಭೂಸ್ನೂರ್
97315 63409, 98440 63409

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಗೀತಂ ಕಾಲೇಜ್ ಹತ್ತಿರ, 40x60 North, 30x50 East, 60x45 East, 20x48 West, 30x50 North, ಮನೆ ಹೊಸ ಮನೆ, 20x30 ಡುಪ್ಲೆಕ್ಸ್ ಮನೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**Property Doctor / ಪ್ರಾಪರ್ಟಿ ಡಾಕ್ಟರ್**
ಈ ಸೈಟ್ ತೊಗೋಬಹುದಾ? ದಾಖಲೆಗಳು ಏನು ಬೇಕು? ಕಾನೂನು ಪ್ರಕಾರ ಸರಿ ಇದೇನಾ? ಲೋನ್ ಸಿಗುತ್ತಾ? ಈ ರೇಟಿಗೆ ನನ್ನ ಸೈಟ್ ಮಾರಾಟ ಮಾಡಬಹುದಾ? ಈ ಎಲ್ಲ ಮಾಹಿತಿಯನ್ನು ನಿಮಗೆ ಕೇವಲ 100/- ನಲ್ಲಿ ಕೊಡಲಾಗುವುದು
96325 54524

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
S.S. ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಕ್ಲೀನಿಂಗ್ ಮಾಡುವವರು ಮತ್ತು ಅಸಿಸ್ಟೆಂಟ್‌ಗಳು ಬೇಕಾಗಿದ್ದಾರೆ.
ಪಾರ್ಟ್ ಟೈಮ್ / ಫುಲ್ ಟೈಮ್
99646 36217

**ಸೈಟ್ ಮಾರಾಟಕ್ಕೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 20x30 ಪೂರ್ವ (16 ಲಕ್ಷ ) 40 ಅಡಿ ರಸ್ತೆ ಪಾರ್ಕ್ ಎದುರು ಸೈಟ್ ಮಾರಾಟಕ್ಕೆ
ಕಿರಣ್ ಭೂಸ್ನೂರ್ : 97315 63409
ನೇರವಾಗಿ ರಿಜಿಸ್ಟರ್ ಪಾರ್ಟಿ

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ, ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್,ಕಿಚನ್, ಪೂಜಾ ರೂಂ, 24ಗಂಟೆ ನೀರಿನ ವ್ಯವಸ್ಥೆಯಿರುವ ಡಬ್ಬಲ್ & ಸಿಂಗಲ್ ಬೆಡ್ ರೂಂ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ.
ಮೊ. : 99004 66607

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
* ಸೇಲ್ಸ್ ಎಕ್ಸಿಕ್ಯೂಟಿವ್
* ಆಫೀಸ್ ಬಾಯ್
ಸಂಪರ್ಕಿಸಿ :
ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**ಓಂ ಶ್ರೀ ಆದಿಶಕ್ತಿ ದುರ್ಗಾದೇವಿ ಮಾತಾ ಜ್ಯೋತಿಷ್ಯ ಕೇಂದ್ರ**
ನಿಮ್ಮ ಸಮಸ್ಯೆಗಳಾದ ಪ್ರೇಮ ವಿಚಾರ, ಕುಟುಂಬ ಕಲಹ, ವಿದೇಶಿ ಪ್ರಯಾಣ, ಅತ್ತೆ-ಸೊಸೆ ಜಗಳ, ಇಷ್ಟ ಪಟ್ಟದ್ದು ನಿಮ್ಮಂತೆ ಆಗಲು, ಆರೋಗ್ಯ ಸಮಸ್ಯೆ, ಹಣಕಾಸಿನ ತೊಂದರೆ, ಉದ್ಯೋಗ ವಿಚಾರ, ಮನೆಯಲ್ಲಿ ಅಶಾಂತಿ, ಇನ್ನೂ ಮುಂತಾದ ಸಮಸ್ಯೆಗಳು, ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿದ್ದರೂ 100 ಕ್ಕೆ 101 ರಷ್ಟು ಪರಿಹಾರ ಮಾಡಿಕೊಡುತ್ತಾರೆ.
ದೈವಜ್ಞ ಪಂಡಿತ್, ದುರ್ಗಾ ಪ್ರಸಾದ್ ಭಟ್ ಸಂಪರ್ಕಿಸಿ :
96205 25246
ನಿಮ್ಮ ಸಮಸ್ಯೆ ಫೋನಿನ ಮೂಲಕ ಪರಿಹಾರ ಮಾಡಿಕೊಡುತ್ತಾರೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET College Road, Siddaveerappa Badavane, 13th Cross, Davanagere.
bhoomikamatrimony.com
77603 16576
90080 55813

**ಮನೆ ಕೆಲಸ, ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ**
ಸಮಯ : ಬೆಳಿಗ್ಗೆ 7.30ರಿಂದ ಸಂಜೆ 7.30ರ ತನಕ ವಸತಿ, ಊಟ ಸೌಲಭ್ಯವಿರುತ್ತದೆ.
ಸಂಬಳ : 8000ರಿಂದ 10,000ರವರೆಗೆ.
ಸ್ಥಳ : ಕುಂದುವಾಡ ರಸ್ತೆ, ಸಪ್ತಗಿರಿ, ಹಾಸ್ಟೆಲ್ ಹತ್ತಿರ, ದಾವಣಗೆರೆ.
89513 51033

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್ ಸೇಲ್ ಔಷಧಿ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಹಾಗು ದಾವಣಗೆರೆಯಲ್ಲಿ ವಾಸವಿರುವವರಿಗೆ ಆದ್ಯತೆ.
ವಿಳಾಸ : ವೆಂಕಟೇಶ್ವರ ಫಾರ್ಮಸುಟಿಕಲ್ಸ್
2ನೇ ಮೇನ್, ಕೆ.ಟಿ.ಜೆ ನಗರ, ದಾವಣಗೆರೆ-02.
ಮೊ : 86607 75329

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, Rate - 2800/- 30x40 East, 30x50 West 60 ಅಡಿ ರೋಡಿಗಿದೆ. 40x60 East, 40x60 North, 40x60, 40x60 East ಅಕ್ಕ-ಪಕ್ಕ, 80 ಅದಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಕಾರುಗಳು ಮಾರಾಟಕ್ಕಿವೆ**
Tata Tiago Diesel 2017
Toyota Innova [V] 2013
Hyundai I20 Topend 2018
Hyundai Creta 2016
ದೈವಿಕ್ ಐನಳ್ಳಿ
99456 43223

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶಿಕ್ಷಕರು ಬೇಕಾಗಿದ್ದಾರೆ**
ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ತ್ಯಾವಣಿಗಿಯಲ್ಲಿರುವ ಮಂದಾರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಿಂದಿ, ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳಿಗೆ ನುರಿತ ಶಿಕ್ಷಕರುಗಳು ಬೇಕಾಗಿದ್ದಾರೆ.
91481 41665

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ.
"ಈರಮ್ಮ ನಿಲಯ"MCC 'A' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, # 397, 8ನೇ ಕ್ರಾಸ್, 8ನೇ ಮೇನ್, ಮಹಾತ್ಮಗಾಂಧಿ ಲ್ಯಾಬ್ ಹತ್ತಿರ, 1ನೇ ಮಹಡಿ, 20x40ರ ಅಳತೆ, 2ಬೆಡ್ ರೂಮ್, ಓಪನ್ ಕಿಚನ್, ಹಾಲ್, ಅಟ್ಯಾಚ್ಡ್ ಬೆಡ್ ರೂಂ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
94482 48242, 78927 53714

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಅಡುಗೆ ಭಟ್ಟರು ಹೆಲ್ಪರ್ ಬೇಕಾಗಿದ್ದಾರೆ**
ವೆಜ್ & ನಾನ್‌ವೆಜ್
ಅನುಭವವಿರುವವರು ಬೇಕಾಗಿದ್ದಾರೆ.
76195 23771

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಅಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
(1 ಎಕರೆ to 20 ಎಕರೆ)
ದಾವಣಗೆರೆ ಹತ್ತಿರ.
Sharma
63608 66997

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮತ್ತು ಡಿಗ್ರಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ. ಸಮಯ : 1.00 ರಿಂದ 5.00
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
# 43H, ಎಸ್.ಜೆ.ಜೆ.ಎಮ್. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**ತಕ್ಷಣ ಸಂಪರ್ಕಿಸಿರಿ**
ನುರಿತ ಪುರುಷ ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, ಬೇಕಾಗಿದ್ದಾರೆ. ESI & PF ಮತ್ತು ಊಟ, ವಸತಿ ಸೌಲಭ್ಯ ಇರುತ್ತದೆ
72044 00262
88844 99983

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್
ಐ.ಟಿ.ಐ ಕಾಲೇಜು, # 617/6, 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ-577005.
95919 21004,73381 00402

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
I, **G. Madhavi** D/o **G. Upendra Raju,** Major Resident of # 9/7682, 1st main, 2nd cross, DCM Township, Davangere want to inform that in my Birth Certificate my father name mentioned as **G. Upendra** an my Mother name mentioned as **G. Yagna.** Now we changed the both father and mother's name as **G Upendra Raju** and **S. Yagnasri** in my Birth cirtifitae before the court of the addl. civil judge at Koppal bearing O.S.No. 172-2022. This is the proff of my **Father and mother** names.

**2 BHK FLAT FOR SALE**
1250 Sq. ft., 2 Balconies.
2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**ಬೇಕಾಗಿದ್ದಾರೆ**
* Accountant experienced Tally known and to manage Industrial office.
* Driver cum assistant
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ.
ವಾಟ್ಸಾಪ್ ರೆಸ್ಯೂಮ್ & ಕರೆ ಮಾಡಿ:
99863 66358

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಯಾವುದೇ ಪ್ರೊಜೆಕ್ಟ್ ರಿಪೋರ್ಟ್ & ಕೊಟೇಶನ್‌ಗಾಗಿ ಸಂಪರ್ಕಿಸಿ**
96204 49302

**ಹೆಸರು ಬದಲಾವಣೆ**
ದಾವಣಗೆರೆ ಸಿಟಿ ದೊಡ್ಡ ಪೇಟೆ ಎಸ್.ಕೆ.ಪಿ. ರಸ್ತೆ, ಗಣಪತಿ ದೇವಸ್ಥಾನ ಹತ್ತಿರದ ವಾಸಿ ಶಿಕಾರಿ ಶಂಭು ತಂದೆ ಪಿ.ಎನ್. ಜಯದೇವಪ್ಪ ಆದ ನಾನು ಈ ಮೂಲಕ ದೃಢೀಕರಿಸುವುದೇನೆಂದರೆ ಆರ್.ಸಿ. ದಾಖಲೆಯಲ್ಲಿ 'ಶಿಕಾರಿ ಶಂಭು' ಎಂದು ನಮೂದಾಗಿದ್ದು, ಹೆಸರು ಫಲಿಸದಿರುವ ಕಾರಣ 'ಶಂಭು' ಎಂದು ಬದಲಿಸಿಕೊಂಡಿದ್ದು, ಮುಂದಿನ ನನ್ನ ಎಲ್ಲಾ ವ್ಯವಹಾರಗಳು 'ಶಂಭು' ಎಂಬ ಹೆಸರಿನಲ್ಲಿಯೇ ನಡೆಯುತ್ತವೆ ಎಂದು ದಿ. 18.01.2024ರಂದು ದಾವಣಗೆರೆ ನೋಟರಿಯವರ ಮುಂದೆ ಪ್ರಮಾಣಿಕರಿಸಿದ್ದೇನೆ. ಶಂಭು

# ಅನಂತ್‌ಕುಮಾರ್ ಹೆಗಡೆ ಸಿಎಂ ಕ್ಷಮೆ ಯಾಚಿಸಲಿ



ಹರಪನಹಳ್ಳಿ, ಜ.18- ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಏಕವಚನ ಬಳಸಿದ ಸಂಸದ ಅನಂತ್‌ಕುಮಾರ್ ಹೆಗಡೆ ಅವರು ಕೂಡಲೇ ಸಿಎಂ ಕ್ಷಮೆ ಯಾಚಿಸಬೇಕು ಎಂದು ರಾಜ್ಯ ಯುವ ಕಾಂಗ್ರೆಸ್ ವಕ್ತಾರ ಹಾಗೂ ಬಳ್ಳಾರಿ ಗ್ರಾಮೀಣ, ವಿಜಯನಗರ ಯುವ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ರಿಯಾಜ್ ಆಗ್ರಹಿಸಿದರು.

ಈ ಕುರಿತು ಪತ್ರಿಕೆಗೆ ಪ್ರತಿಕ್ರಿಯಿಸಿದ ರಿಯಾಜ್ ಅವರು, ಸಿದ್ದರಾಮಯ್ಯನವರು ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ. ಅದಕ್ಕೆ ಗೌರವ ಕೊಡಬೇಕಾಗಿ ರೋದು ಎಲ್ಲರ ಧರ್ಮ. ಅನಂತ್‌ಕುಮಾರ್ ಹೆಗಡೆ ಯಾವುದೇ ಪಕ್ಷದಿಂದ ಗೆದ್ದಿರಬಹುದು. ಆ ರೀತಿಯ ಮಾತು ಯಾರಿಗೂ ಶೋಭೆಯಲ್ಲ. ಅವರು ಈ ಹಿಂದೆ ಡಾ.ಅಂಬೇಡ್ಕರ್ ಬಗ್ಗೆಯೂ ಅವಹೇಳನಕಾರಿ ಮಾತನಾಡಿದ್ದಾರೆ. ಹಿಂದೂ ಧರ್ಮಕ್ಕೆ ಅವಹೇಳನ ಮಾಡುತ್ತಿದ್ದಾರೆ. ಸಂವಿಧಾನ ಬದಲಾವಣೆ ಮಾಡುತ್ತೇನೆ ಎನ್ನುತ್ತಾರೆ. ಸಂವಿಧಾನ ಇವರೊಬ್ಬರಿಗೆ ಬರೆದು ಕೊಟ್ಟಿದ್ದಾರಾ ಎಂದು ಕಿಡಿಕಾರಿದರು. ಎಲೆಕ್ಷನ್ ಬಂದ ಕೂಡಲೇ ಇವರಿಗೆಲ್ಲ ಹಿಂದುತ್ವ ನೆನಪಾಗುತ್ತದೆ. ಎಲೆಕ್ಷನ್ ಮುಗಿದ ಮೇಲೆ ಎಲ್ಲವೂ ಬಂದ್ ಆಗುತ್ತದೆ. ಇವೆಲ್ಲವೂ ಎಲೆಕ್ಷನ್ ಗಿಮಿಕ್‌ಗಳು ಎಂದು ರಿಯಾಜ್ ತಿಳಿಸಿದರು.

## ಹಾಲಿವಾಣದಲ್ಲಿ ಗ್ರಾಮದೇವತೆ ಹಬ್ಬದ ವಿಚಾರವಾಗಿ ಗಲಾಟೆ : ಓರ್ವ ವ್ಯಕ್ತಿಗೆ ಪೆಟ್ಟು

ಮಲೇಬೆನ್ನೂರು, ಜ.18- ಹಾಲಿವಾಣ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ವಳೂರು ಕರಿಯಮ್ಮದೇವಿ ಜಾತ್ರೆ ವಿಚಾರವಾಗಿ ಗುರುವಾರ ನಡೆದ ಸಭೆಯ ವೇಳೆ ಮಾತಿನ ಚಕಮಕಿ ನಡೆದು, ಗಲಾಟೆಯಾಗಿರುವ ಬಗ್ಗೆ ವರದಿಯಾಗಿದ. ಅಲ್ಲದೇ, ಗಲಾಟೆಯಲ್ಲಿ ಓರ್ವ ವ್ಯಕ್ತಿಗೆ ಪೆಟ್ಟಾಗಿದೆ ಎಂದು ಹೇಳಲಾಗಿದ್ದು, ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈ ಹಿಂದಿನ ಸಭೆಯ ಪ್ರಕಾರ ಏಪ್ರಿಲ್ 1 ರಿಂದ 10 ರವರೆಗೆ ಗ್ರಾಮದೇವತೆ ಹಬ್ಬ ಆಚರಿಸಲು ಗ್ರಾಮಸ್ಥರು ತೀರ್ಮಾನಿಸಿದ್ದು, ಉತ್ಸವಕ್ಕೆ ಪಟ್ಟಿ ಎತ್ತುವ ವಿಷಯದಲ್ಲಿ ವ್ಯತ್ಯಾಸವಾಗಿ ಈ ಗಲಾಟೆ ನಡೆದಿದೆ ಎಂದು ತಿಳಿದು ಬಂದಿದೆ.

## ಹರಿಹರಕ್ಕೆ ಕಾಲ್ನಡಿಗೆ

ದಾವಣಗೆರೆ, ಜ.18- ನಗರದ ಕುಂದವಾಡಕೆರೆ ವಾಯುವಿಹಾರ ಬಳಗದ ವತಿಯಿಂದ ಇದೇ 21ರ ಭಾನುವಾರ ಬೆಳಿಗ್ಗೆ 5-40ಕ್ಕೆ ಪಿಬಿ ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಇರುವ ಬಿಎಸ್‌ಎನ್‌ಎಲ್ ಕಚೇರಿ ಬಳಿಯಿಂದ ಹರಿಹರದ ಶ್ರೀ ಹರಿಹರೇಶ್ವರ ದೇವಸ್ಥಾನದ ಆವರಣದವರೆಗೆ ಕಾಲ್ನಡಿಗೆ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ. ಭಾಗವಹಿಸುವವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 8971389102, 9844127137, 9448375866.

# ಹೊನ್ನಾಳಿ ಶ್ರೀಗಳ ಇಷ್ಟಲಿಂಗ ಪೂಜಾನುಷ್ಠಾನಕ್ಕೆ ತೆರೆ

ಹೊನ್ನಾಳಿ, ಜ. 18- ಮನುಷ್ಯನ ಅನೇಕ ಸಂಕಷ್ಟ ದಿನಗಳು ಹಾಗೂ ಸಮಸ್ಯೆಗಳಿಗೆ ಕೆಲವು ಬಾರಿ ಅವರವರ ಮೌನವೇ ಪರಿಹಾರ ದೊರಕಿಸಿ ಕೊಡುತ್ತದೆ ಎಂಬುದು ನಾವೂ ಸೇರಿದಂತೆ ಕೆಲವರು ಅನುಭವಕ್ಕೆ ಒಳಗಾಗಿರುತ್ತಾರೆ. ಹಲವರು ಕೆಲ ಸಂದರ್ಭ ಮೌನವಾಗಿದ್ದು, ಸಮಸ್ಯೆಗೆ ಪರಿಹಾರ ಪಡೆಯಬಹುದಾಗಿದೆ ಎಂದು ಹೊನ್ನಾಳಿ ಹಿರೇಕಲ್ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ರಟ್ಟಿಹಳ್ಳಿ ತಾಲ್ಲೂಕು ಹಳ್ಳೂರು ಗ್ರಾಮದಲ್ಲಿ (ಎಂ.ಡಿ. ಶಂಕರನಹಳ್ಳಿ) ಮೂರು ದಿನಗಳ ಕಾಲ ನಡೆಸಿದ 'ಮೌನ ಇಷ್ಟಲಿಂಗ ಪೂಜಾನುಷ್ಠಾನ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕೆಲವು ಬಾರಿ ಮನುಷ್ಯನಿಗೆ 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಯುಕ್ತಿ ಎಷ್ಟೊಂದು ವಾಸ್ತವ ಎಂಬುದಕ್ಕೆ ಕೆಲ ದೃಷ್ಟಾಂತಗಳೊಂದಿಗೆ ವಿವರಿಸಿದ ಶ್ರೀಗಳು, ಲಿಂ. ಚಂದ್ರಶೇಖರ ಸ್ವಾಮೀಜಿಗಳ ಸಂಕಲ್ಪದಂತೆ ವಿವಿಧ ಪವಿತ್ರ ಸ್ಥಳಗಳಲ್ಲಿ ಮುಂದುವರೆಸಿಕೊಂಡು ಬರುತ್ತಿದ್ದೇನೆ ಎಂದರು.

ತುಂಗಭದ್ರಾ ನದಿ ದಡದ ಆಂಜನೇಯ, ಈಶ್ವರ (ಶಂಕರ), ರಾಮಾನುಜಾಚಾರ್ಯರ ದೇವಸ್ಥಾನದ ಮಧ್ಯದಲ್ಲಿ ಮೂರು ದಿನಗಳಿದ್ದು, ಮೌನ ಅನುಷ್ಠಾನದಲ್ಲಿ ಕಾಲ ಕಳೆದಿರುವುದು ಆನಂದ, ಶಾಂತಿ, ಸಮಾಧಾನಗಳನ್ನು ಹೆಚ್ಚು ತಂದುಕೊಟ್ಟಿದೆ ಎಂದರು.



**ರಟ್ಟಿಹಳ್ಳಿ ತಾಲ್ಲೂಕಿನ ಹಳ್ಳೂರಿನಲ್ಲಿ ಚನ್ನಮಲ್ಲಿಕಾರ್ಜುನ ಶ್ರೀ**

ಕೋಣಂದೂರು ಶ್ರೀ ಶ್ರೀಪತಿ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, ಬ್ರಾಹ್ಮೀ ಮುಹೂರ್ತದಲ್ಲಿ ನಡೆಸಿದ ಹೊನ್ನಾಳಿ ಶ್ರೀಗಳ ಮೌನ ಇಷ್ಟಲಿಂಗ ಪೂಜಾನುಷ್ಠಾನ ಕಾರ್ಯಕ್ರಮ ಭಕ್ತರ ಕಲ್ಯಾಣಕ್ಕಾಗಿಯೇ ಹೊರತು, ಶ್ರೀಗಳ ಸ್ವಾರ್ಥಕ್ಕಾಗಿ ಅಲ್ಲ ಎಂಬುದನ್ನು ನಾವು-ನೀವೆಲ್ಲಾ ತಿಳಿಯಬೇಕಾಗಿದೆ ಎಂದು ಹೇಳಿದರು.

ಚಿಕ್ಕಕಬ್ಬಾರ ರೇವಣಸಿದ್ಧಯ್ಯ ಹಿರೇಮಠ ಉಪನ್ಯಾಸ ನೀಡಿದರು. ಕತ್ತಿಗಿ ಮಠದ ಚನ್ನಪ್ಪಸ್ವಾಮಿಗಳು, ಅತಿಥಿಗಳಾದ ನಿವೃತ್ತ ಉಪನ್ಯಾಸಕ ಬಸವರಾಜಪ್ಪ, ನ್ಯಾಮತಿ ಹವಳದ ಲಿಂಗರಾಜ್, ಹೊನ್ನಾಳಿ ಕುಮಾರಸ್ವಾಮಿ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ಸಂತೋಷ್ ಪಾಟೀಲ್, ಹಾಲಸ್ವಾಮಿ, ಪ್ರಕಾಶಶಾಸ್ತ್ರಿ, ತಿಮ್ಮಯ್ಯ, ಜಗದೀಶ್, ಹಳ್ಳೂರು ಎಂ.ಡಿ. ಶಂರನಹಳ್ಳಿ ಹಿರೇಮಠಸ್ಥರು, ಪುರದಕೇರಿ, ಚಿಕ್ಕಕಬ್ಬಾರ, ಕಮಲಾಪುರ, ಚಟ್ನಹಳ್ಳಿ, ಹೊಳೆ ಹರಳಹಳ್ಳಿ, ಮೈದೂರ ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಡಿಡಿಸಿಸಿ ಬ್ಯಾಂಕ್ ಚುನಾವಣೆಗೆ 9 ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ



ಹೊನ್ನಾಳಿ, ಜ. 18 - ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕರ ಹೊನ್ನಾಳಿ ತಾಲ್ಲೂಕಿನ 1 ನಿರ್ದೇಶಕರ ಸ್ಥಾನಕ್ಕೆ ಕಾಂಗ್ರೆಸ್ ಮುಖಂಡರಾದ ಡಿ.ಎಸ್. ಸುರೇಂದ್ರಗೌಡ, ಕೆಂಗಲಹಳ್ಳಿ ಷಣ್ಮುಖಪ್ಪ ಮತ್ತು ಬಿಜೆಪಿ ಜಿ. ರಾಮನಗೌಡ ಹಾಗೂ ನ್ಯಾಮತಿ ಕ್ಷೇತ್ರದಿಂದ 1 ನಿರ್ದೇಶಕರ ಸ್ಥಾನಕ್ಕೆ ಡಿ.ಜಿ. ವಿಶ್ವನಾಥ್, ಡಾ. ಗಂಗಪ್ಪ, ನ್ಯಾಮತಿ ಮಧು, ಗಂಜೀನಹಳ್ಳಿ ಮಲ್ಲೇಶಪ್ಪ, ಚಿನ್ನಿಕಟ್ಟೆ ಚೇತನ್, ಅರಬಗಟ್ಟೆ ಚಿಕ್ಕಪ್ಪ ಅವರುಗಳು ಚುನಾವಣಾಧಿಕಾರಿ ನಜ್ಮಾ ಅವರಿಗೆ ನಾಮಪತ್ರ ಸಲ್ಲಿಸಿದ್ದಾರೆ.

2023ರ ಅಕ್ಟೋಬರ್‌ವರೆಗೆ ದಾವಣಗೆರೆ ಜಿಲ್ಲೆಯಿಂದ ಒಟ್ಟು 9 ನಿರ್ದೇಶಕರ ಸ್ಥಾನಗಳಿದ್ದು, ಈ ಚುನಾವಣೆಗೂ ಮುನ್ನ ಬೈಲಾ ತಿದ್ದುಪಡಿ ಮಾಡಿ ಹೆಚ್ಚುವರಿಯಾಗಿ 4 ಸ್ಥಾನಗಳಿಗೆ ಅವಕಾಶ ನೀಡಲಾಗಿದೆ. ಜಿಲ್ಲೆಯಿಂದ ಈ ಬಾರಿ ಒಟ್ಟು 13 ಸ್ಥಾನಗಳಿಗೆ ಅವಕಾಶ ನೀಡಲಾಗಿದೆ. ಈ ಹಿಂದೆ ಹೊನ್ನಾಳಿ ತಾಲ್ಲೂಕಿನಿಂದ 1 ಸ್ಥಾನಕ್ಕೆ ಮಾತ್ರವೇ ಅವಕಾಶವಿದ್ದು, ಈ ಬಾರಿ ನ್ಯಾಮತಿ ತಾಲ್ಲೂಕಿನಿಂದಲೂ ಹೆಚ್ಚುವರಿಯಾಗಿ 1 ಸ್ಥಾನ ನೀಡಲಾಗಿದೆ.

ನಾಮಪತ್ರ ಸಲ್ಲಿಕೆಗೆ ಗುರುವಾರ ಕೊನೆ ದಿನವಾಗಿದ್ದು, ಜ. 19ರ ಶುಕ್ರವಾರ ನಾಮಪತ್ರ ಪರಿಶೀಲನೆಯಿದ್ದು, ಜ. 20ರ ಶನಿವಾರ ಚುನಾವಣೆಯಿಂದ ಹಿಂದೆ ಸರಿಯುವವರಿಗೆ ನಾಮಪತ್ರ ಮರಳಿ ಪಡೆಯುವ ಅವಕಾಶ ನೀಡಲಾಗಿದೆ.

ಪ್ರಥಮ ಬಾರಿಗೆ ನ್ಯಾಮತಿ ತಾಲ್ಲೂಕಿನಿಂದ ಚುನಾವಣೆಗೆ ಅವಕಾಶ ನೀಡಿದ್ದರ ಹಿನ್ನೆಲೆಯಲ್ಲಿ, ಒಟ್ಟು 6 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು ಮತ್ತು ಹೊನ್ನಾಳಿ ತಾಲ್ಲೂಕಿನ ಕಾಂಗ್ರೆಸ್ ಬೆಂಬಲಿತ ಇಬ್ಬರು ನಾಮಪತ್ರ ಸಲ್ಲಿಸಿದ್ದು ಇದರಲ್ಲಿ ಶಾಸಕರ ಪುತ್ರ ಮಾಜಿ ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ ಮತ್ತು ಮಾಜಿ ನಿರ್ದೇಶಕ ಕೆಂಗಲಹಳ್ಳಿ ಷಣ್ಮುಖಪ್ಪ ಅವರು ನಾಮಪತ್ರ ಸಲ್ಲಿಸಿದ್ದು ಪಕ್ಷವು ಯಾರಿಗೆ ಮಣೆ ಹಾಕುತ್ತದೆ ಎಂದು ಕಾದು ನೋಡಬೇಕಾಗಿದೆ.

## ಇಂದಿನಿಂದ 'ನೂರು ದಿನ ಸಾವಿರ ಹಳ್ಳಿ ಒಂದು ಗುರಿ'



ರೇವಣಸಿದ್ಧೇಶ್ವರ ಸಿಂಹಾಸನ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ, ಶಾಖಾಮಠ, ಕನಕಧಾಮ, ಹೊಸದುರ್ಗ, ಚಿತ್ರದುರ್ಗ, ಬೆಂಗಳೂರು ವಿಭಾಗದ ಪೀಠಾಧ್ಯಕ್ಷರಾದ ಈಶ್ವರಾನಂದ ಪುರಿ ಸ್ವಾಮಿಗಳ ನೇತೃತ್ವದಲ್ಲಿ ನಡೆಯುತ್ತಿರುವ '100 ದಿನ ಸಾವಿರ ಹಳ್ಳಿ ಒಂದು ಗುರಿ' ಕಾರ್ಯಕ್ರಮ ಸಮೀಪದ ಆಲೂರು ಗ್ರಾಮದಲ್ಲಿ ಇದೇ 19ನೇ ಶುಕ್ರವಾರ ಬೆಳಿಗ್ಗೆ ಉದ್ಘಾಟನೆಯಾಗಲಿದೆ.

ದಾವಣಗೆರೆ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಪೂಜ್ಯರು ಭೇಟಿ ನೀಡುವ ಪ್ರವಾಸದ ವೇಳಾಪಟ್ಟಿ:

ಇಂದು ಬೆಳಿಗ್ಗೆ 9 ಗಂಟೆಗೆ ಆಲೂರು, 11 ಗಂಟೆಗೆ ಅಣಜಿ, 1 ಗಂಟೆಗೆ ಹಾಲುವರ್ತಿ, 3 ಗಂಟೆಗೆ ನೀರ್ಥಡಿ, 4 ಗಂಟೆಗೆ ರುದ್ರಕಟ್ಟೆ, 5 ಗಂಟೆಗೆ ಕೊಗ್ಗನೂರು, 5.30ಕ್ಕೆ ನೇರ್ಲಿಗೆ, 6 ಗಂಟೆಗೆ ಮಾಯಕೊಂಡದ ಕಾರ್ಯಕ್ರಮ ಮುಗಿಸಿ, ರಾತ್ರಿ ಬೀರೇಶ್ವರ ದೇವಸ್ಥಾನದ ಅತಿಥಿಗೃಹದಲ್ಲಿ ತಂಗಲಿದ್ದಾರೆ.

ನಾಳೆ ಶನಿವಾರ ಬೆಳಿಗ್ಗೆ 9 ಗಂಟೆಗೆ ಮತ್ತಿ, 10.30ಕ್ಕೆ ಹೂವಿನಮಡು, 11.30ಕ್ಕೆ ಲೋಕಿಕೆರೆ, 12.30ಕ್ಕೆ ರಾಮಗೊಂಡನಹಳ್ಳಿ, 2.30ಕ್ಕೆ ಮಳಲಕೆರೆ, 3.30ಕ್ಕೆ ಬಾಡ, 4.30ಕ್ಕೆ ಅಣಬೇರು, ಸಂಜೆ 6 ಕ್ಕೆ ನಲ್ಕುಂದದ ಕಾರ್ಯಕ್ರಮ ಮುಗಿಸಿ ದಾವಣಗೆರೆಯಲ್ಲಿ ತಂಗಲಿದ್ದಾರೆ.

ನಾಡಿದ್ದು ಭಾನುವಾರ ಬೆಳಿಗ್ಗೆ 9 ಕ್ಕೆ ಹೊಸಬಿಸಲೇರಿ, 10 ಗಂಟೆಗೆ ದುರ್ಗಾಂಬಿಕಾ ಕ್ಯಾಂಪ್, 11 ಗಂಟೆಗೆ ಮುದಹದಡಿ, 12 ಗಂಟೆಗೆ ಬಟ್ಲಕಟ್ಟೆ, 1 ಗಂಟೆಗೆ ಕನಗೊಂಡನಹಳ್ಳಿ, 2.30ಕ್ಕೆ ಬಲ್ಲೂರು ಶಿರಗನಹಳ್ಳಿ, 3.30ಕ್ಕೆ ಜಡಗನಹಳ್ಳಿ, 4.30ಕ್ಕೆ ನಾಗರಸನಹಳ್ಳಿ, ಸಂಜೆ 5. ಗಂಟೆಗೆ ಕೋಳೇನಹಳ್ಳಿ, ಸಂಜೆ 6 ಗಂಟೆಗೆ ಹದಡಿ ಕಾರ್ಯಕ್ರಮ ಮುಗಿಸಿ ದಾವಣಗೆರೆಯಲ್ಲಿ ತಂಗಲಿದ್ದಾರೆ.

ದಿನಾಂಕ ಸೋಮವಾರ ಬೆಳಿಗ್ಗೆ 9 ಗಂಟೆಗೆ ಶಾಮನೂರು, 10.30ಕ್ಕೆ ಹೊಸಕುಂದವಾಡ, 11 ಕ್ಕೆ ಹಳೇಕುಂದವಾಡ, 12.30ಕ್ಕೆ ನೀಲಾನಹಳ್ಳಿ, 1 ಗಂಟೆಗೆ ದೊಡ್ಡಬಾತಿ, 2.30ಕ್ಕೆ ಆವರಗೊಳ್ಳ, 3.30ಕ್ಕೆ ಕಕ್ಕರಗೊಳ್ಳ, 5.00ಕ್ಕೆ ಚಿಕ್ಕಬೂದಿಹಾಳ್, ಸಂಜೆ 6.00ಕ್ಕೆ ಮಾಳಗೊಂಡನಹಳ್ಳಿ ಕಾರ್ಯಕ್ರಮ ಮುಗಿಸಿ ದಾವಣಗೆರೆಯಲ್ಲಿ ತಂಗಲಿದ್ದಾರೆ.

## ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ : ವಚನಾನಂದ ಶ್ರೀ ಸಂತಸ



ಹರಿಹರ, ಜ.18- ಮಾನವತಾ ವಾದಿ, ಸಮಾಜೋದ್ಧಾರಕ, ದಾರ್ಶ ನಿಕ, ವಿಶ್ವಗುರು ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಡಳಿತ ಪಕ್ಷದ ಸಂಪುಟದ ಸಚಿವರಿಗೆ ಅಭಿನಂದನೆ ತಿಳಿಸುವುದಾಗಿ ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮೀಜಿ ಹೇಳಿದರು.

ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ನಾಡಿನ ಎಲ್ಲಾ ಸಮಾಜದ ಒಳಿತಿಗಾಗಿ ಬಸವಣ್ಣನವರು ಕೊಟ್ಟಿರುವ ಕೊಡುಗೆ ಅಪಾರವಾಗಿದೆ. ಅವರು ನೀಡಿರುವ ಕೊಡುಗೆಯಿಂದ ವಿಶ್ವಮಟ್ಟದ ನಾಯಕರಾಗಿ ಹೊರಹೊಮ್ಮಿದ ಬಸವಣ್ಣನವರನ್ನು ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ನಾಡಿನಾದ್ಯಂತ ಇರುವ ಎಲ್ಲಾ ಜನತೆಗೆ ಸಂತೋಷ ಮತ್ತು ಹರ್ಷವನ್ನು ತರಿಸಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯದ ವಿವಿಧ ಮಠದ ಸ್ವಾಮಿಗಳು ಉಪಸ್ಥಿತರಿದ್ದರು.

## ಬಕ್ಕೇಶ್ವರ ದೇವಸ್ಥಾನದಲ್ಲಿ ಪುರಾಣ ಪ್ರಾರಂಭ



ದಾವಣಗೆರೆ, ಜ. 18- ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಈಚೆಗೆ ನಡೆದ ಶ್ರೀ ಗುರು ಶಿವಯೋಗಿ ಮಹಾರುದ್ರ ಸ್ವಾಮೀಜಿ ಅವರ ಪುರಾಣ ಪ್ರವಚನದ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಶ್ರೀ ಕಲ್ಲಯ್ಯಜ್ಜ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಶ್ರೀ ಬಂಡಯ್ಯ ಶಾಸ್ತ್ರಿ, ಉದ್ಯಮಿ ಅಥಣಿ ಎಸ್. ವೀರಣ್ಣ, ಬಸವರಾಜ್, ಅಜ್ಜಂಪುರ ಮೃತ್ಯುಂಜಯ, ರಾಜಶೇಖರ್ ಗುಂಡಗಟ್ಟಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# 7ನೇ ವೇತನ ಆಯೋಗದ ಶಿಫಾರಸ್ಸು ಜಾರಿಗೆ ಆಗ್ರಹ



ಹೊನ್ನಾಳಿ, ಜ.18- ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ನೈರುತ್ಯ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಸೂಚನೆ ಮೇರೆಗೆ ತಾನು ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿ ನೈಋತ್ಯ ಪದವೀಧರ ಕ್ಷೇತ್ರದ ವ್ಯಾಪ್ತಿಯ ಮತದಾರರನ್ನು ಭೇಟಿ ಮಾಡುವ ಕೆಲಸ ಮಾಡುತ್ತಿದ್ದೇನೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಆಯನೂರು ಮಂಜುನಾಥ್ ಹೇಳಿದರು.

ಅವಳಿ ತಾಲ್ಲೂಕಿನ ಪದವೀಧರ ಮಾತದಾರರನ್ನು ಭೇಟಿ ಮಾಡಲು ನಿನ್ನೆ ಹೊನ್ನಾಳಿಗೆ ಆಗಮಿಸಿದ್ದ ಸಂದರ್ಭದಲ್ಲಿ ಪ್ರವಾಸಿ ಮಂದಿರಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಎನ್.ಪಿ.ಎಸ್. ಮತ್ತು ಓಪಿಎಸ್. ನೌಕರರ ನಿವೃತ್ತಿ ಸೌಲಭ್ಯಗಳ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿದ್ದು, ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಅವಧಿಯಲ್ಲಿ ಈ ಎನ್. ಪಿ.ಎಸ್. ಯೋಜನೆ ಜಾರಿಗೆ ಬಂದಿದ್ದು, ತಮ್ಮನ್ನು ಓಪಿಎಸ್ ಯೋಜನೆಗೆ ಒಳಪಡಿಸಬೇಕೆಂಬ ನೌಕರರ ಬೇಡಿಕೆ ಹಾಗೇ ಮುಂದುವರೆದುಕೊಂಡು ಬರುತ್ತಿದ್ದು, ಈಗಿನ ಕಾಂಗ್ರೆಸ್ ಸರ್ಕಾರ ಓಪಿಎಸ್ ಯೋಜನೆ ಮತ್ತೆ ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸಿದ್ದು, ಮುಂಬರುವ ಬಜೆಟ್‌ನಲ್ಲಿ ಓ.ಪಿ.ಎಸ್. ಘೋಷಣೆ ಮಾಡಿ ಹಣ ಮೀಸಲಿರಿಸಬೇಕು ಎಂದು ಮುಖ್ಯಮಂತ್ರಿ ಹಾಗೂ ಉಪಉಪಮುಖ್ಯಮಂತ್ರಿ ಗಳಿಗೆ ಒತ್ತಾಯಪೂರ್ವಕ ವಿನಂತಿ ಮಾಡುತ್ತೇನೆ. ಇದರ ಜೊತೆಗೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಕೂಡ ವಿಸ್ತರಿಸಬೇಕು ಎಂದು ಮನವಿ ಮಾಡಿದ್ದೇನೆ ಎಂದು ಹೇಳಿದರು.

ಈ ಹಿಂದೆ ಅತಿಥಿ ಉಪನ್ಯಾಸಕರಿಗೆ ಸಂಬಳ ನಿಂತಾಗ ಈ ಬಗ್ಗೆ ಏಕಾಂಗಿಯಾಗಿ ಸದನದಲ್ಲಿ ಗಟ್ಟಿ ಧ್ವನಿ ಎತ್ತಿ ಅತಿಥಿ ಉಪನ್ಯಾಸಕರಿಗೆ ಸಂಬಳ ಕೊಡಿಸಿದ್ದೇನೆ. ಇದೇ ರೀತಿ ಅತಿಥಿ ಶಿಕ್ಷಕರ ಸಮಸ್ಯೆಗಳು ಕೂಡ ಇದ್ದು, ಇವುಗಳ ನಿವಾರಣೆಗೆ ಸಮರ್ಪಕವಾಗಿ ಧ್ವನಿ ಎತ್ತಿ, ಪರಿಹಾರ ಕೊಡಿಸುವಲ್ಲಿ ತಾನು ಹಿಂದೆ ಬೀಳುವುದಿಲ್ಲ ಎಂದು ಹೇಳಿದರು.

7ನೇ ವೇತನ ಆಯೋಗ ಇನ್ನೂ ಕೂಡ ಸರ್ಕಾರಕ್ಕೆ ತನ್ನ ವರದಿ ನೀಡಿಲ್ಲ. ಪ್ರಸ್ತುತ ಶೇ.17ರಷ್ಟು ಮಧ್ಯಂತರ ಪರಿಹಾರ ನೀಡುತ್ತಿದೆ. ಕೂಡಲೇ ಮಧ್ಯಂತರ ಪರಿಹಾರ ನಿಲ್ಲಿಸಿ ಸರ್ಕಾರ ವರದಿ ತರಿಸಿಕೊಂಡು 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಹಿಂದ ತಾಲ್ಲೂಕು ಅಧ್ಯಕ್ಷ ಡಾ. ಈಶ್ವರನಾಯ್ಕ, ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ, ಮುಖಂಡ ಎಚ್.ಎ. ಗದ್ದಿಗೇಶ್, ಬೇಲಿಮಲ್ಲೂರು ನರಸಪ್ಪ, ಸಣ್ಣಕ್ಕಿ ಬಸವನಗೌಡ, ಸಾಸ್ವೆಹಳ್ಳಿ ಕೃಷ್ಣಮೂರ್ತಿ, ಕೆ.ಪಿ.ಸಿ.ಸಿ. ಸದಸ್ಯ ನಾಗೇಂದ್ರ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಪುಷ್ಪಾ ರವೀಶ್, ಯುವ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಆಶಾ, ಸೊರಟೂರು ಗ್ರಾ.ಪಂ. ಸದಸ್ಯೆ ಸುಮಾ, ಜಿಲ್ಲಾ ಯುವ ಕಾಂಗ್ರೆಸ್‌ನ ಎಚ್.ಎಸ್.ರಂಜಿತ್, ವೀರಣ್ಣ ಮುಂತಾದವರು ಇದ್ದರು.

## ಭಾರತಕ್ಕೆ 2,480 ವಿಮಾನ, 41 ಸಾವಿರ ಪೈಲಟ್‌ಗಳ ಅಗತ್ಯ

ಹೈದರಾಬಾದ್, ಜ. 18 – ಭಾರತಕ್ಕೆ ಮುಂದಿನ 20 ವರ್ಷಗಳಲ್ಲಿ 2,840 ಹೊಸ ವಿಮಾನಗಳು ಹಾಗೂ 41 ಸಾವಿರ ಪೈಲಟ್‌ಗಳ ಅಗತ್ಯವಿರಲಿದೆ ಎಂದು ಏರ್‌ಬಸ್ ಅಧ್ಯಕ್ಷ ರೆಮಿ ಮೇಲಾರ್ಡ್ ಅಂದಾಜಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ದಶಕಗಳಲ್ಲಿ ಭಾರತವು ಜಾಗತಿಕ ವಿಮಾನಯಾನ ವಲಯದ ಶಕ್ತಿಯಾಗಲಿದೆ. 20 ವರ್ಷಗಳಲ್ಲಿ ದೇಶಕ್ಕೆ 2,840 ಹೊಸ ವಿಮಾನಗಳ ಅಗತ್ಯ ಬರಲಿದೆ ಎಂದಿದ್ದಾರೆ.

## ಮಿನಿ ಲಾರಿ ಸಂಘದಿಂದ ಪ್ರತಿಭಟನೆ




ದಾವಣಗೆರೆ,ಜ.18- ಜಿಲ್ಲಾ ಮಿನಿ ಲಾರಿ ಮಾಲೀಕರ ಮತ್ತು ಚಾಲಕರ ಸಂಘದವರು ಕೇಂದ್ರ ಸರ್ಕಾರದ ಅಪಘಾತಕ್ಕೆ ಸಂಬಂಧಿಸಿದಂತೆ 10 ವರ್ಷ ಜೈಲು ಮತ್ತು 7ಲಕ್ಷ ರೂ.ಗಳ ದಂಡದ ವಿರುದ್ಧ ಇಂದು ಕೃಷಿ ಮಾರುಕಟ್ಟೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಸಂಘದ ಅಧ್ಯಕ್ಷ ಡಿ.ಇಸ್ಮಾಯಿಲ್, ಉಪಾಧ್ಯಕ್ಷ ಮೃತ್ಯುಂಜಯ, ಪ್ರಧಾನ ಕಾರ್ಯದರ್ಶಿ ಸೈಯದ್ ಜಾಕೀರ್ ಹುಸೇನ್, ಸಹಕಾರ್ಯದರ್ಶಿ ಸೈಯದ್ ಸಮೀಉಲ್ಲಾ ಹಾಗೂ ಸಂಘದ ಪದಾಧಿಕಾರಿಗಳು, ಚಾಲಕರು, ಹಾಗೂ ಲಾರಿ ಮಾಲೀಕರ ಸಂಘದ ಕಾರ್ಯದರ್ಶಿ ಸಿ.ಪವನ್ ಕುಮಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಬಗರ್ ಹುಕ್ಕುಂ ಸಾಗುವಳಿ ಸಮಿತಿಗೆ ನೇಮಕ





ಮಲೇಬೆನ್ನೂರು, ಜ. 18 - ಹರಿಹರ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಯನ್ನು ಸರ್ಕಾರ ರಚಿಸಿ ಆದೇಶ ಹೊರಡಿಸಿದೆ.

ಅಧ್ಯಕ್ಷರಾಗಿ ಶಾಸಕ ಬಿ.ಪಿ. ಹರೀಶ್, ಸದಸ್ಯರಾದ ಎಳೆಹೊಳೆ ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ.ಕರಿಬಸಪ್ಪ, ಹಳ್ಳಿಹಾಳ್ ಹೆಚ್.ಬಿ.ಚಂದ್ರಶೇಖರ್, ವಾಸನದ ಶ್ರೀಮತಿ ಸವಿತಾ ಮಾಂತೇಶ್ ಮತ್ತು ಸದಸ್ಯ ಕಾರ್ಯದರ್ಶಿಯನ್ನಾಗಿ ತಹಶೀಲ್ದಾರ್ ಅವರನ್ನು ನೇಮಕ ಮಾಡಿ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಜಗದೀಶ್ ಆದೇಶ ಹೊರಡಿಸಿದ್ದಾರೆ.

## ನಗರದಲ್ಲಿ ಇಂದು ಪ್ರತಿಭೋತ್ಸವ

ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆ ವತಿಯಿಂದ 'ಪ್ರತಿಭೋತ್ಸವ-2024'ವನ್ನು ಇಂದು ಸಂಜೆ 3.30ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಕೆ.ಪಿ. ಮಲ್ಲೇಶ್ ವಹಿಸುವರು. ಜಿ.ಕೊಟ್ರೇಶ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಜಯ್ ಕುಮಾರ್ ಜಿ.ಬಿ., ನಾಗರಾಜ್ ಕೆ., ಶ್ರೀಮತಿ ವಿ. ಮಂಜುಳ ಮಲ್ಲೇಶ್ ಆಗಮಿಸುವರು.

## ಹಾಲಿವಾಣ : ನಾಳೆ ಆರೋಗ್ಯ ತಪಾಸಣೆ

ಮಲೇಬೆನ್ನೂರು, ಜ.18- ಹಾಲಿವಾಣ ಗ್ರಾಮದಲ್ಲಿ ನಾಡಿದ್ದು ದಿನಾಂಕ 20 ರ ಶನಿವಾರ ಕೆ.ಎಸ್.ಹೆಗಡೆ ಆಸ್ಪತ್ರೆಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಶ್ರೀ ಕರಿಯಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮದ ಶಿವಕ್ಕಳ ಅಂಜನೇಯ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು 'ಪ್ರದ್ಯುತ್' ಕಾರ್ಯಕ್ರಮ

ಎಂ.ಬಿ.ಎ ಪ್ರೋಗ್ರಾಂ, ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಮತ್ತು ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್ ಇವರುಗಳ ಸಂಯುಕ್ತಾಶ್ರಯದಲ್ಲಿ 'ಪ್ರದ್ಯುತ್' ಕಾರ್ಯಕ್ರಮವು ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಆಹ್ವಾನಿತರಾಗಿ ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗಿಶ್ವರಾನಂದಜೀ ಮಹಾರಾಜ್, ಮುಖ್ಯ ಅತಿಥಿಗಳಾಗಿ ಸರ್ಕಲ್ ಇನ್‌ಸ್ಪೆಕ್ಟರ್ ಎಸ್. ಬಾಲಚಂದ್ರ ನಾಯಕ್ ಆಗಮಿಸುವರು. ಬಾಪೂಜಿ ಬಿ ಸ್ಕೂಲ್ಸ್‌ನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಅಧ್ಯಕ್ಷತೆ ವಹಿಸುವರು.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಆವರಗೆರೆ ಮತ್ತು ಇತರೆ ತಾಲ್ಲೂಕು ಮತ್ತು ಹೋಬಳಿ ಕೇಂದ್ರಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪರವಾಗಿ**

**ಪ್ರಕಟಣೆ**

ಈ ಮೂಲಕ ಜಿಲ್ಲೆ ಮತ್ತು ರಾಜ್ಯಾದ್ಯಂತ ಇರುವ ಡಿ. ಫಾರ್ಮ ಪದವೀಧರರಿಗೆ ತಿಳಿಸುವುದೇನೆಂದರೆ ದಾವಣಗೆರೆ ಜಿಲ್ಲೆಯ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಹಾಗೂ ಹೋಬಳಿ ಕೇಂದ್ರಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಿದ್ದು, ಸದರಿ ಕೇಂದ್ರಗಳನ್ನು ನಡೆಸಲು ಡಿ-ಫಾರ್ಮ, ಬಿ-ಫಾರ್ಮ ಪದವೀಧರರು ಬೇಕಾಗಿರುತ್ತಾರೆ. ಆದ್ದರಿಂದ ಈ ಪ್ರಕಟಣೆ ನಂತರದ 15 ದಿನಗಳೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಕಳುಹಿಸಲು ಕೋರಿದೆ.

**ಸಂಭಾವನೆ : 15,000-20,000/- (ಪ್ರತಿ ತಿಂಗಳಿಗೆ)**

**ಅರ್ಜಿ ಕಳುಹಿಸಬೇಕಾದ ವಿಳಾಸ : ಮುಖ್ಯ ಕಾರ್ಯನಿರ್ವಾಹಕರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಆವರಗೆರೆ ಹಳೇ ಪಿ.ಬಿ. ರಸ್ತೆ, ಆವರಗೆರೆ, ದಾವಣಗೆರೆ ತಾ.**

ಸೂಚನೆ : ಸಂಘ ಹಾಗೂ ಡಿ ಫಾರ್ಮ ಉದ್ಯೋಗಿ ನಡುವೆ ವ್ಯಾಪಾರದ ಆದಾಯದ ಮೇಲೆ ಲಾಭ ಹಂಚಿಕೆ ಒಪ್ಪಂದ ಕೂಡ ಮಾಡಬಹುದಾಗಿದೆ.

**ಹುಟ್ಟುಹಬ್ಬದ ಶುಭಾಷಯಗಳು**

ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಎಸ್.ಆರ್.ವಿ. ಸಮೂಹ ಸಂಸ್ಥೆಗಳ ಸಂಸ್ಥಾಪಕರು, ಶ್ರೀ ವೀರಮಾಹೇಶ್ವರ ಕೋ-ಆಪ್ ಸೊಸೈಟಿಯ ಅಧ್ಯಕ್ಷರು ಹಾಗೂ ವೀರಶೈವ ಜಂಗಮಸಮಾಜದ ಮುಖಂಡರಾದ

**ತ್ಯಾವಣಿಗೆ ವೀರಭದ್ರಸ್ವಾಮಿ**

ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.




❖ ಪಂಚಾಕ್ಷರಯ್ಯ ಬಸಾಪುರ ❖ ಎನ್.ಎಂ. ವೀರೇಂದ್ರಸ್ವಾಮಿ
❖ ಎಲ್‌ಎಂಆರ್ ಬಸವರಾಜಯ್ಯ ❖ ಬಿ.ಎಂ. ರವಿ
❖ ಎಂ.ಎಂ. ವೃಷಬೇಂದ್ರಯ್ಯಸ್ವಾಮಿ ❖ ವೀರಯ್ಯ ಆರ್.ಎಂ.
❖ ಶ್ರೀಮತಿ ತಾರಾ ❖ ಶ್ರೀಮತಿ ರೇಖಾ
❖ ಶ್ರೀಮತಿ ಸುಮನ್ ಕಟಗಿಹಳ್ಳಿಮಠ ❖ ಚನ್ನಬಸವ ಶರ್ಮಾ ಹಾಗೂ

**ಶ್ರೀ ವೀರಮಾಹೇಶ್ವರ ಕೋ-ಆಪ್ ಸೊಸೈಟಿ ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು**

❖ ಎಸ್.ಎಂ. ಮುರುಗೇಶ್, ಸಿದ್ದೇಶ್ವರ ಟ್ರೇಡರ್ಸ್, ದಾವಣಗೆರೆ
❖ ಚಂದ್ರಶೇಖರಯ್ಯ ಹಾಡೋನಹಳ್ಳಿ ❖ ರೇಣುಕಸ್ವಾಮಿ ಗೋವಿನಕೋವಿ
❖ ದಾವಣಗೆರೆ ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘದ ಪದಾಧಿಕಾರಿಗಳು

LALITHA PRE UNIVERSITY COLLEGE
LALITHA IIT & NEET ACADEMY
YOGI RAM
SHASHI EDUCATIONAL TRUST (R)
LALITHA INTERNATIONAL PUBLIC SCHOOL
Class 10th State / CBSE / ICSE, Students – 2023-24
LPUC TALENT ASSESSMENT TEST
Date : 21 Jan 2024 - Day : Sunday
Slot – 1 : 10AM to 11:30AM - Slot – 2 : 12PM to 1.30PM
Test Pattern Subject : Mathematics, Science and English
Phy / Chem / Math / Bio / Eng = 50Marks
Scan QR Code for Online Registration
ವಿಶೇಷ ಸೂಚನೆ : ಪ್ರವೇಶ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಆಕರ್ಷಕ ಬೆಳ್ಳಿ ಪದಕ ಹಾಗೂ ಶಾಲಾ ಪ್ರವೇಶಾತಿ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಆಕರ್ಷಕ ಬೆಳ್ಳಿ ಪದಕವನ್ನು ಸಹ ನೀಡಲಾಗುವುದು.
LIPS TALENT TEST :
Date : 21 Jan 2024 - Day : Sunday
Slot – 1 : 10AM to 11:30AM - Slot – 2 : 12PM to 1.30PM
Test Pattern Grade = 1st to 4th = Kan/Eng/ EVS / Math = 40Marks
Grade = 5th to 9th = Kan/Eng/Sci/Social / Math = 50Marks
Register Your Name on or Before 20.01.2024
Contact for Registration: 7022004109 / 7022004042 / 9980629965
Venue : # 67/1, Lokikere Main Road, Davangere – 577005.

# ಮಂದಿರ ಸಂಸ್ಕೃತಿಯ ಪ್ರತೀಕ

## 'ಮಂದಿರವಲ್ಲೇ ಕಟ್ಟಿದೆವು' ಕೃತಿ ಬಿಡುಗಡೆ ಮಾಡಿದ ನಾ.ತಿಪ್ಪೇಸ್ವಾಮಿ



ದಾವಣಗೆರೆ, ಜ. 18- 496 ವರ್ಷಗಳ ಸುದೀರ್ಘ ಹೋರಾಟದ ಫಲವಾಗಿ ಅಯೋಧ್ಯೆ ಯಲ್ಲಿ ರಾಮ ಮಂದಿರ ನಿರ್ಮಾಣವಾಗುತ್ತಿದೆ. ಇದು ಕೇವಲ ರಾಮಂದಿರವಲ್ಲ, ರಾಷ್ಟ್ರಮಂದಿರ. ನಮ್ಮ ದೇಶದ ಸಂಸ್ಕೃತಿಯ ಪ್ರತೀಕ ಎಂದು ರಾಷ್ಟ್ರೀಯ ಸ್ವಯಂ ಸೇವಪಕ ಸಂಘದ ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಹೇಳಿದರು.

ಸೋಮೇಶ್ವರ ಪ್ರತಿಷ್ಠಾನದ ಆಶ್ರಯದಲ್ಲಿ ಗುರುವಾರ ನಗರದ ನೇತ್ರಾವತಿ ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ 'ಮಂದಿರವಲ್ಲೇ ಕಟ್ಟಿದೆವು' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

1928-34ರ ಅವಧಿಯಲ್ಲಿ ಮಂದಿರದ ಕಟ್ಟಡ ಬಿದ್ದಾಗಿನಿಂದಲೂ ಮಂದಿರ ನಿರ್ಮಾಣಕ್ಕಾಗಿ ದೇಶವು ಹೋರಾಟ ನಡೆಸುತ್ತಲೇ ಇದೆ. ಲಕ್ಷಾಂತರ ಜನರು ಪ್ರಾಣ ತ್ಯಾಗ ಮಾಡಿದ್ದಾರೆ. ಮಂದಿರ ನಿರ್ಮಿಸಲೇ ಬೇಕೆಂಬ ಸಂಕಲ್ಪದಿಂದ ಎಲ್ಲಾ ಸವಾಲುಗಳನ್ನು ಎದುರಿಸಿ ಇದೀಗ ಮಂದಿರ ನಿರ್ಮಾಣವಾಗುತ್ತಿದೆ. ಇದು ನಮ್ಮೆಲ್ಲರ ಸೌಭಾಗ್ಯ ಎಂದು ಹೇಳಿದರು.

ಶ್ರೀರಾಮ-ಕೃಷ್ಣರು ಧರ್ಮ ಸ್ಥಾಪನೆಗಾಗಿ ಜನ್ಮತಾಳಿದವರು ಎಂದರು. ಪಿತೃವಾಕ್ಯ ಪರಿಪಾಲಕನಾಗಿ, ಏಕ ಪತ್ನಿ ವ್ರತಸ್ಥನಾಗಿ, ಆದರ್ಶ ವ್ಯಕ್ತಿಯಾಗಿ ಹೇಗೆ ಬಾಳಬೇಕು ಎಂಬುದನ್ನು ಶ್ರೀರಾಮ ತೋರಿಸಿ ಕೊಟ್ಟಿದ್ದಾನೆ. ಬೇರೆಲ್ಲಾ ದೇವಾಲಯಗಳಲ್ಲಿ ಒಂದೇ ಮೂರ್ತಿ ಇದ್ದರೆ ರಾಮ ಮಂದಿರಗಳಲ್ಲಿ ರಾಮ, ಸೀತೆ, ಲಕ್ಷ್ಮಣ, ಹನುಮಂತನ ಮೂ ರ್ತಿಗಳೂ ಇರುತ್ತವೆ. ಇದು ಪರಿ ವಾರದ ಸಂಕೇತ ಎಂದು ಹೇಳಿದರು.

ರಾಮ ಮಂದಿರವು ರಾಷ್ಟ್ರೀಯ ಸ್ಮಾರಕವಾಗಲಿ ಎಂಬ ಉದ್ದೇಶದಿಂದ ದೇಶಾದ್ಯಂತ ನಿಧಿ ಸಮರ್ಪಣಾ ಅಭಿಯಾನ ನಡೆಸಲಾಯಿತು. ಈ ವೇಳೆ ಗ್ರಾಮಗಳಲ್ಲಿ ನಿರೀಕ್ಷೆಗೂ ಮೂರಿ ಅಭೂತಪೂರ್ವ ಬೆಂಬಲ ದೊರೆಯಿತು. ಜನರು ಮಂದಿರಕ್ಕಾಗಿ ದಾರಾಳವಾಗಿ ಹಣ ನೀಡಿದರು. ಸ್ವಯಂ ಸೇವಕರು ಸುಮಾರು 12 ಕೋಟಿ ಮನೆಗಳು ಹಾಗೂ 70 ಕೋಟಿ ಜನರನ್ನು ತಲುಪಿದ್ದರು. ಪರಿಣಾಮ ಎರಡು ಹಂತದ ಕೋವಿಡ್ ಸಂಕಷ್ಟಗಳ ನಡುವೆಯೂ 3 ಸಾವಿರ ಕೋಟಿ ರೂ.ಗೂ ಹೆಚ್ಚು ಹಣ ಸಂಗ್ರಹವಾಯಿತು ಎಂದರು.

ಕೃತಿಯ ಲೇಖಕರೂ, ಪತ್ರಕರ್ತರೂ ಆದ ರಮೇಶ್ ಕುಮಾರ್ ನಾಯಕ್ ಮಾತನಾಡುತ್ತಾ, ರಾಮ ಮಂದಿರ ನಿರ್ಮಾಣಕ್ಕಾಗಿ ನಡೆದ ಹೋರಾಟ ಸುದೀರ್ಘ ಹಾಗೂ ರೋಚಕವಾದದ್ದು. ಸ್ವಾತಂತ್ರ್ಯ ಹೋರಾಟ ಕುರಿತು ಅನೇಕ ಪುಸ್ತಕಗಳಿವೆ. ಆದರೆ ಮಂದಿರ ನಿರ್ಮಾಣ ಹೋರಾಟದ ಬಗ್ಗೆ ಪುಸ್ತಕಗಳಿರಲಿಲ್ಲ. ಈ ಹಿನ್ನೆಲೆಯಲ್ಲಿ ಮಂದಿರ ನಿರ್ಮಾಣದ ಶ್ರಮವನ್ನು ಕೃತಿಯಲ್ಲಿ ದಾಖಲಿಸಲಾಗಿದೆ ಎಂದರು.

ಕೃತಿಯ ಅಧಿಕೃತ ಬಿಡುಗಡೆ ದಾವಣಗೆರೆಯಲ್ಲಿ ಇಂದು ನಡೆಯುತ್ತಿದೆಯಾದರೂ, ಈಗಾಗಲೇ 3ನೇ ಮುದ್ರಣ ಕಂಡಿದೆ. ಮೂರು ಸಾವಿರಕ್ಕೂ ಹೆಚ್ಚು ಕೃತಿಗಳು ಮಾರಾಟವಾಗಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಿದ್ದರು. ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಂ. ಸುರೇಶ್ ವೇದಿಕೆ ಮೇಲಿದ್ದರು. ಮಾಜಿ ಶಾಸಕ ಟಿ.ಗುರುಸಿದ್ದನಗೌಡ, ಆರೈಕೆ ಆಸ್ಪತ್ರೆ ಮುಖ್ಯಸ್ಥ ಡಾ.ರವಿಕುಮಾರ್, ಕೆ.ಬಿ. ಕೊಟ್ರೇಶ್, ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಡಿಡಿಸಿಸಿ ಬ್ಯಾಂಕ್ ಚುನಾವಣೆ ಕೋಗುಂಡಿ ಬಕ್ಕೇಶಪ್ಪ ನಾಮಪತ್ರ ಸಲ್ಲಿಕೆ




ದಾವಣಗೆರೆ,ಜ.18- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಗೆ ಇದೇ ದಿನಾಂಕ 25ರಂದು ಚುನಾವಣೆ ನಡೆಯಲಿದ್ದು, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ನಾಮಪತ್ರ ಸಲ್ಲಿಸಿದ್ದಾರೆ.

ಸಿ ವಿಭಾಗ ಹೊಂದಿರುವ ಸಹಕಾರಿ ಬ್ಯಾಂಕುಗಳು ಮತ್ತು ಕ್ರೆಡಿಟ್ ಸೊಸೈಟಿಗಳಿಂದ ಬಕ್ಕೇಶಪ್ಪ ಉಮೇದುವಾರಿಕೆ ಅರ್ಜಿ ನೀಡಿದ್ದಾರೆ.

ಶಿವ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಹಿರಿಯ ನಿರ್ದೇಶಕ ಗುರುಸಿದ್ದಯ್ಯ, ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸ ಮೂರ್ತಿ, ಶ್ರೀಶೈಲ ಕ್ರೆಡಿಟ್ ಸೊಸೈಟಿ ನಿರ್ದೇಶಕ ಮೇಕಾ ಮುರುಳೀಕೃಷ್ಣ, ಬೇತೂರು ಕರಿಬಸಪ್ಪ, ಪರಶುರಾಮ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಮಲೇಬೆನ್ನೂರು ತಲುಪಿದ ಭದ್ರಾ ನಾಲೆ ನೀರು



ಮಲೇಬೆನ್ನೂರು, ಜ.18- ಭದ್ರಾ ಜಲಾಶಯದಿಂದ ಬೇಸಿಗೆ ಹಂಗಾಮಿಗೆ ಬಲದಂಡೆ ನಾಲೆಗೆ ಬಿಡುಗಡೆ ಮಾಡಿರುವ ನೀರು ಗುರುವಾರ ಬೆಳಿಗ್ಗೆ ಕೊಮಾರನಹಳ್ಳಿ ಕಾಲುವೆಯಲ್ಲಿ ಹರಿದು ಬಂದಿತು. ಸಂಜೆ ವೇಳೆಗೆ ಈ ನೀರು ಮಲೇಬೆನ್ನೂರು ಭಾಗಕ್ಕೆ ತಲುಪಿದ್ದು, ತೋಟದ ಬೆಳೆಗಾರರು ನೀರನ್ನು ತಮ್ಮ ಹೊಲಗಳಿಗೆ ಹರಿಸಿಕೊಳ್ಳಲಿದ್ದಾರೆ.

ಗುರುವಾರ ಬೆಳಿಗ್ಗೆ ಮಾಹಿತಿ ಪ್ರಕಾರ ಬಲದಂಡೆ ನಾಲೆ 2650 ಕ್ಯೂಸೆಕ್ಸ್ ಮತ್ತು ಎಡದಂಡೆ ನಾಲೆಗೆ 380 ಕ್ಯೂಸೆಕ್ಸ್ ನೀರನ್ನು ಬಿಡಲಾಗಿದ್ದು, ಈ ನೀರು ಜ.27 ರವರೆಗೆ ನಾಲೆಯಲ್ಲಿ ಹರಿಯಲಿದೆ. ನಂತರ 20 ದಿವಸ ಬಂದ್ ಮಾಡಿ, ಪುನಃ 13 ದಿವಸ ನೀರು ಹರಿಸಲಾಗುವುದು.

# ಗಣರಾಜ್ಯೋತ್ಸವದ 215ನೇ ಫಲ ಪುಷ್ಪ ಪ್ರದರ್ಶನ ಆರಂಭ

ಬೆಂಗಳೂರು, ಜ.18 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಶ್ವಗುರು ಬಸವಣ್ಣ ಮತ್ತು ವಚನ ಸಾಹಿತ್ಯಧಾರಿತ ಗಣರಾಜ್ಯೋತ್ಸವದ 215ನೇ ಫಲ ಪುಷ್ಪ ಪ್ರದರ್ಶನಕ್ಕೆ ಉದ್ಘಾಟನೆ ಮಾಡಲಾಯಿತು.

ತೋಟಗಾರಿಕೆ ಇಲಾಖೆ ಉದ್ದೇಶ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ಬದಲಾಗುತ್ತಿರುವ ಪಾರಂಪರಿಕ ವಾಣಿಜ್ಯ ಹಾಗೂ ಸೌಂದರ್ಯೋಪಾಸಕ ತಂತ್ರಜ್ಞಾನ ವಿನ್ಯಾಸ ಮತ್ತು ವಿಸ್ತಾರಗಳನ್ನು ಕೃಷಿಕರಿಗೆ ಯುವ ಜನರಲ್ಲಿ ತೋಟಗಾರಿಕೆಯ ಮಹತ್ವ ಅದರ ಪ್ರಯೋಜನದ ಕುರಿತು ಮಾಹಿತಿ ನೀಡುವುದು ಮತ್ತು ಫಲ ಪುಷ್ಪ ಪ್ರದರ್ಶನ ಅಂದಾಜು ವೆಚ್ಚ 2.85 ಕೋಟಿ ರೂ.ಗಳಾಗಿದ್ದು, ಫಲಪುಷ್ಪ ಪ್ರದರ್ಶನಕ್ಕೆ ವೀಕ್ಷಕರ ಸಂಖ್ಯೆ ಹತ್ತು ಲಕ್ಷಕ್ಕೂ ಹೆಚ್ಚು ಜನರು ಬರಬಹುದೆಂದು ಅಂದಾಜಿಸಲಾಗಿದೆ.



ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ಅನುಭವ ಮಂಟಪ ಎಂದರೆ ಒಂದು ಬಾರಿಗೆ 5 ಲಕ್ಷ ಗುಲಾಬಿ ಮತ್ತು ಸೇವಂತಿಗೆ ಹೂಗಳನ್ನು ಬಳಸಲಾಗಿದೆ. ಇದು ಕೂಡಲ ಸಂಗಮದಲ್ಲಿರುವ ಬಸವಣ್ಣನವರ ಐಕ್ಯ ಮಂಟಪದ ಪುಷ್ಪ ಮಾದರಿ ಎಂದು ಹೇಳಬಹುದು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಗಣಿ ಮತ್ತು ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವ ಶಾಮನೂರು ಮಲ್ಲಿಕಾರ್ಜುನ್, ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗ ರೆಡ್ಡಿ, ನಾಡೋಜ ಡಾ. ಗೂ.ರು. ಚನ್ನಬಸಪ್ಪ, ತೋಟಗಾರಿಕೆ ಇಲಾಖೆ ಸರ್ಕಾರದ ಕಾರ್ಯದರ್ಶಿಗಳು, ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

# ಇರಾನ್ ಮೇಲೆ ಪಾಕ್ ಪ್ರತಿದಾಳಿ ; 9 ಸಾವು

ಇಸ್ಲಾಮಾಬಾದ್, ಜ. 18 – ಇರಾನ್‌ನ ಸೀಸ್ತಾನ್ - ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಉಗ್ರರ ತಾಣಗಳ ಮೇಲೆ ದಾಳಿ ನಡೆಸಿರುವುದಾಗಿ ಪಾಕಿಸ್ತಾನ ತಿಳಿಸಿದೆ. ದಾಳಿಯಲ್ಲಿ 9 ಜನ ಸಾವನ್ನಪ್ಪಿದ್ದಾರೆ. ನಿನ್ನೆಯಷ್ಟೇ ಪಾಕಿಸ್ತಾನದ ಉಗ್ರರ ತಾಣಗಳ ಮೇಲೆ ಇರಾನ್ ದಾಳಿ ನಡೆಸಿತ್ತು. ಇದಕ್ಕೆ ಪಾಕಿಸ್ತಾನ ಪ್ರತಿದಾಳಿ ನಡೆಸಿದೆ.

ಪಾಕಿಸ್ತಾನದ ವಿದೇಶಾಂಗ ಇಲಾಖೆಯ ಕಚೇರಿಯು ಹೇಳಿಕೆ ನೀಡಿದ್ದು, ದಾಳಿಯಲ್ಲಿ ಹಲವು ಉಗ್ರರು ಹತರಾಗಿದ್ದಾರೆ ಎಂದು ತಿಳಿಸಿದೆ.

ಡ್ರೋನ್, ರಾಕೆಟ್ ಸೇರಿದಂತೆ ಹಲವು ಶಸ್ತ್ರಗಳ ಮೂಲಕ ದಾಳಿ ನಡೆಸಿರುವುದಾಗಿ ಪಾಕಿಸ್ತಾನ ಹೇಳಿದೆ. ಬಲೂಚಿಸ್ತಾನ ಲಿಬರೇಷನ್ ಆರ್ಮಿ ಹಾಗೂ ಬಲೂಚಿಸ್ತಾನ ಲಿಬರೇಷನ್ ಫ್ರಂಟ್ ನೆಲೆಗಳ ಮೇಲೆ ದಾಳಿ ನಡೆಸಿರುವುದಾಗಿ ಪಾಕಿಸ್ತಾನ ಹೇಳಿದೆ.

ದಾಳಿಯನ್ನು ಖಂಡಿಸಿರುವ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ನಸೀರ್ ಕನಾನಿ, ದಾಳಿಯಲ್ಲಿ ಇಬ್ಬರು ಪುರುಷರು, ಮೂವರು ಮಹಿಳೆಯರು ಹಾಗೂ ನಾಲ್ಕು ಮಕ್ಕಳು ಸಾವನ್ನಪ್ಪಿರುವುದಾಗಿ ಹೇಳಿದ್ದಾರೆ.

# ಬಸವಣ್ಣನವರನ್ನು ಕರ್ನಾಟಕ ಸಾಂಸ್ಕೃತಿಕ ನಾಯಕ ಘೋಷಣೆ : ಬಸವ ಬಳಗ ಕೃತಜ್ಞತೆ

ದಾವಣಗೆರೆ, ಜ.18- ರಾಜ್ಯ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಮಹಾಮಾವತಾವದಿ ಜಗಜ್ಯೋತಿ ಬಸವಣ್ಣನವರನ್ನು 'ಕರ್ನಾಟಕ ಸಾಂಸ್ಕೃತಿಕ ನಾಯಕ'ನೆಂದು ಘೋಷಿಸಲು ಐತಿಹಾಸಿಕ ನಿರ್ಣಯ ಕೈಗೊಂಡಿದ್ದು, ಅದಕ್ಕಾಗಿ ಸ್ಥಳೀಯ ಬಸವ ಬಳಗ ಜಾಗತಿಕ ಲಿಂಗಾಯ ಮಹಾಸಭೆ ಹಾಗೂ ಎಲ್ಲಾ ಬಸವ ಭಕ್ತರ ಪರವಾಗಿ ಮತ್ತು ಸಂಪುಟದ ಸರ್ವ ಸದಸ್ಯರಿಗೆ ಬಸವ ಬಳಗದ ಜಿಲ್ಲಾ ಅಧ್ಯಕ್ಷ ಎ.ಹೆಚ್.ಹುಚ್ಚಪ್ಪ ಹಾಗೂ ಬಸವ ಬಳಗದ ಸರ್ವ ಸದಸ್ಯರುಗಳು ಕೃತಜ್ಞತೆ ಸಲ್ಲಿಸಿದ್ದಾರೆ.

# ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ : ಪಂಡಿತಾರಾಧ್ಯ ಶ್ರೀ ಸಂತಸ



ಸಾಣೇಹಳ್ಳಿ, ಜ.18- ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವ ವಿಚಾರ ತಿಳಿದು ತುಂಬಾ ಸಂತೋಷವಾಯಿತು. ಇದಕ್ಕಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಸಂಪುಟದ ಎಲ್ಲ ಸಚಿವರನ್ನು ಅಭಿನಂದಿಸುವುದಾಗಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕರಾದರು ಎಂದಾಕ್ಷಣ ಕೇವಲ ಸಂಸ್ಕೃತಿಗೆ ಮಾತ್ರ ಮೀಸಲು ಅಂತ ಅಲ್ಲ. ಸಂಸ್ಕೃತಿಯಲ್ಲಿ ಧರ್ಮ, ಕಲೆ, ಸಾಹಿತ್ಯ, ಸಂಗೀತ, ನಾಟಕ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಇದೆ. ಜೀವನದ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಎಲ್ಲ ಚೈತನ್ಯವನ್ನು ಸಮಾಜಕ್ಕೆ ತಂದುಕೊಟ್ಟವರು ಬಸವಣ್ಣನವರು. ಅಂತಹ ಬಸವಣ್ಣನವರನ್ನು ಕರ್ನಾಟಕ ಸರಕಾರ 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವುದು ಕರ್ನಾಟಕದ ಜನತೆಗೆ ಮಾತ್ರವಲ್ಲ; ಇಡೀ ಭಾರತೀಯರು ಮೆಚ್ಚಬಹುದಾದ, ಗೌರವಿಸಬಹುದಾದ ಸಂಗತಿ ಎಂದವರು ಹೇಳಿದ್ದಾರೆ.

ಸರ್ಕಾರ ಕೇವಲ ಘೋಷಣೆ ಮಾಡಿದರೆ ಸಾಲದು. ಅದು ಕಲೆ, ಸಾಹಿತ್ಯ, ಸಂಗೀತ ಇವುಗಳ ನೆಲೆಯಲ್ಲಿ ಬಸವಣ್ಣನವರ ಆಶಯಗಳನ್ನು ಸಮಾಜದಲ್ಲಿ ಜಾರಿಗೆ ತರಬೇಕು. ಇವುಗಳಿಗೆ ಒಂದು ಸಮಿತಿಯನ್ನು ನೇಮಕ ಮಾಡಿ ಅದರಲ್ಲಿ ಅರ್ಹವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿ ಹಾಗೂ ಸದಸ್ಯರನ್ನಾಗಿ ನೇಮಿಸಬೇಕು. ಅವರ ಮೂಲಕ ಬಸವ ಸಂದೇಶವನ್ನು ಇಡೀ ನಾಡಿನಲ್ಲಿ ಬಿತ್ತರಿಸುವಂಥ ಕಾರ್ಯವನ್ನು ಸರಕಾರ ಮಾಡಬೇಕು. ಅದಕ್ಕೆ ಬೇಕಾದ ಆರ್ಥಿಕ ನೆರವನ್ನು ಸರಕಾರ ನೀಡಬೇಕು ಎಂದು ಸ್ವಾಮೀಜಿ ಸರ್ಕಾರಕ್ಕೆ ಸಲಹೆ ನೀಡಿದರು.

# ಮಂತ್ರಾಲಯದಲ್ಲಿ ನಗರದ ರಾಘುವೇಂದ್ರ ಸಪ್ತಾಹ ಆಮಂತ್ರಣ ಪತ್ರಿಕೆ ಬಿಡುಗಡೆ



ದಾವಣಗೆರೆ, ಜ. 18 - ಬರುವ ಮಾರ್ಚ್ 11 ರಿಂದ 17 ರವರೆಗೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿರುವ 31ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಆಮಂತ್ರಣ ಪತ್ರಿಕೆಗೆ ಮಂತ್ರಾಲಯದ ರಾಯರ ಸನ್ನಿಧಿಯಲ್ಲಿ ಗುರುವಾರ ಪೂಜೆ ಸಲ್ಲಿಸಲಾಯಿತು.

ನಗರದಿಂದ ತೆರಳಿದ್ದ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವ ಸಮಿತಿಯ ಸದಸ್ಯರು ಮಹೋತ್ಸವಕ್ಕೆ ಆಗಮಿಸುವಂತೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಾಧೀಶರಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರಿಗೆ ಆಮಂತ್ರಣ ಪತ್ರಿಕೆ ನೀಡಿದರು. ಇದೇ ಸಂದರ್ಭದಲ್ಲಿ ಶ್ರೀಪಾದಂಗಳವರು ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿದರು.

ಮಂತ್ರಾಲಯ ದಾಸ ಸಾಹಿತ್ಯ ಯೋಜನೆಯ ನಿರ್ದೇಶಕ ಕೆ. ಅಪ್ಪಣ್ಣಾಚಾರ್ಯರು, ಪರಿಮಳಾಚಾರ್ಯ ಸೇರಿ ಅನೇಕ ಪಂಡಿತರಿಗೆ ಇದೇ ಸಂದರ್ಭದಲ್ಲಿ ಆಹ್ವಾನ ನೀಡಲಾಯಿತು.

ಶ್ರೀ ರಾಘವೇಂದ್ರ ಸಪ್ತಾಹ ಸಮಿತಿ ಕಾರ್ಯದರ್ಶಿ ಕಂಪ್ಲಿ ಗುರು ರಾಜಾಚಾರ್, ಸಹ ಕಾರ್ಯದರ್ಶಿ ಗಳಾದ ಎನ್. ಆರ್. ನಾಗಭೂಷಣ ರಾವ್, ಸತ್ಯಬೋಧ ಕುಲಕರ್ಣಿ, ನಿರ್ವಹಣಾ ಸಮಿತಿಯ ಡಾ. ಸಿ.ಕೆ. ಆನಂದತೀರ್ಥಾಚಾರ್, ಪಲ್ಲಕ್ಕಿ ವಾಸುದೇವಾಚಾರ್, ಬದರಿನಾರಾಯಣ, ಪಿ.ಕೆ. ಪ್ರಕಾಶ್, ಎಸ್.ಟಿ. ಕುಲಕರ್ಣಿ, ರಾಜಣ್ಣ, ಹಿರಿಯ ಪತ್ರಕರ್ತ ರಮೇಶ ಜಹಗೀರದಾರ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಅರೆ ನೀರಾವರಿ ಬೆಳೆ ಬೆಳೆಯಲು ಸಲಹೆ

ದಾವಣಗೆರೆ, ಜ.18- ಕರ್ನಾಟಕ ನೀರಾವರಿ ನಿಗಮದ ಭದ್ರಾ ನಾಲಾ ಜಿಲ್ಲಾ ವ್ಯಾಪ್ತಿಗೆ ಒಳಪಡುವ ರೈತರು ಬೇಸಿಗೆ ಹಂಗಾಮಿನಲ್ಲಿ ತೋಟವನ್ನು ಹೊರತುಪಡಿಸಿ ಇತರೆ ಬೆಳೆ ಬೆಳೆಯದಂತೆ ಸಲಹೆ ನೀಡಲಾಗಿದೆ.

ಪ್ರಸ್ತುತ ಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣ ಗಣನೆಗೆ ತೆಗೆದುಕೊಂಡು ಜಲಾಶಯದ ಎಡದಂಡೆ ಮತ್ತು ಬಲದಂಡೆ ನಾಲೆಗಳಿಗೆ 23-24ನೇ ಸಾಲಿನ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಜಲಾಶಯದಿಂದ ನೀರನ್ನು ಹರಿಸಲಾಗುವುದು. ಈಗಾಗಲೇ ಬಲದಂಡೆ ಕಾಲುವೆಗೆ ಜನವರಿ 15 ರಿಂದ ನೀರನ್ನು ಹರಿಸಲಾಗಿದೆ.

ಬೆಳೆದು ನಿಂತಿರುವ ಬೆಳೆಗಳಿಗೆ ಮತ್ತು ಜನ ಜಾನುವಾರುಗಳಿಗೆ ಕುಡಿಯಲು ಹಾಗೂ ಬೆಳೆದು ನಿಂತ ತೋಟಗಳಿಗೆ ಮಾತ್ರ ನೀರನ್ನು ಹರಿಸಲಾಗುವುದು. ಬೆಳೆದು ನಿಂತಿರುವ ತೋಟಗಾರಿಕೆ ಬೆಳೆಗಳನ್ನು ಹೊರತುಪಡಿಸಿ. ಭತ್ತ ಅಥವಾ ಇತರೆ ಯಾವುದೇ ಬೆಳೆಯನ್ನು ಈ ಹಂಗಾಮಿನಲ್ಲಿ ಬೆಳೆಯದಿರಲು ಭದ್ರಾ ನಾಲಾ ಸಂ.5 ರ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಶಿವಯೋಗಿ ಸಿದ್ದರಾಮೇಶ್ವರರ ಆದರ್ಶ ಇಂದಿಗೂ ಪ್ರಸ್ತುತ



ದಾವಣಗೆರೆ, ಜ. 18- 12 ನೇ ಶತಮಾನ ಶ್ರೇಷ್ಠ ವಚನಕಾರರ ಯುಗವಾಗಿದ್ದು, ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ಕಾಯಕ ಇಂದಿಗೂ ಪ್ರಸ್ತುತ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಭೋವಿ ಸಮಾಜದ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಿನ್ನೆ ನಡೆದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರ ಕಾಲದ ಅನುಭವ ಮಂಟಪದಲ್ಲಿ ತನ್ನ ಕಾಯಕ ನಿಷ್ಠೆ ಮುಖಾಂತರ ಶ್ರೀ ಶಿವಯೋಗಿ ಸಿದ್ದರಾಮೇಶ್ವರರು ಗುರುತಿಸಿಕೊಂಡರು. ಸಮಾಜದ ಒಳಿತಿಗಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ವಚನಗಳ ಮೂಲಕ ಸಮಾಜವನ್ನು ತಿದ್ದುವ ಕಾರ್ಯ ನಿರ್ವಹಿಸಿದರು. ಆದ್ದರಿಂದ ನಾವೆಲ್ಲರೂ ಜಾತಿ, ಮತ, ಪಂಥಗಳೆನ್ನದೆ ಎಲ್ಲರೂ ಇವರ ಜಯಂತ್ಯೋತ್ಸವವನ್ನು ಆಚರಿಸುವ ಜೊತೆಗೆ ಇವರ ಕಾಯಕ ತತ್ವಗಳನ್ನು ಜೀವನದಲ್ಲಿ ಅಳಡಿಸಿಕೊಳ್ಳಬೇಕು. ಇಂತಹ ಮಹಾನ್ ಶರಣರ ಸ್ಮರಣೆಯ ಮೂಲಕ ಸಮಾಜ ತನ್ನನ್ನು ತಾನು ಅರಿತು ಬದಲಾಗಬೇಕಿದೆ. ಕೆರೆ ಕಟ್ಟೆ, ಕಾಲುವೆ, ಕಟ್ಟುವ ಕರ್ಮ ಮಾರ್ಗದಲ್ಲಿ ಸಾಗಿ, ಮಾನವ ಜನ್ಮದ ಸಾರ್ಥಕತೆಯನ್ನು ನಿರೂಪಿಸಿದ ಇವರು ಬಸವಣ್ಣ ಹಾಗೂ ಶರಣರ ಭೇಟಿಯಿಂದ ಜ್ಞಾನಮಾರ್ಗದಲ್ಲಿ ಸಾಗಿದವರಾಗಿದ್ದಾರೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ನಗರ ಪಾಲಿಕೆ ಸದಸ್ಯ ಶಿವಾನಂದ, ರೇಷ್ಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಡಿ. ಬಸವರಾಜು, ಸಮಾಜದ ಮುಖಂಡ ಮಂಜುನಾಥ್, ಶ್ರೀನಿವಾಸ್, ಹೆಚ್. ಜಯಣ್ಣ, ಆರ್.ಎಲ್. ಲಾ ಕಾಲೇಜಿನ ಪ್ರಾಧ್ಯಾಪಕ ವಿದ್ಯಾಧರ, ವೇದಮೂರ್ತಿ ಟಿ. ಉಪನ್ಯಾಸ ನೀಡಿದರು.

ಮದುವೆಯ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ
ಅಭಿವೃದ್ಧಿ
ಸಿಲ್ಕ್ ಇಂಡಿಯಾ® 2024
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
19 ರಿಂದ 28 ಜನವರಿ 2024 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್
ಪಿ.ಬಿ. ರಸ್ತೆ, ದಾವಣಗೆರೆ
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
OPENING TODAY
Upto 30 % Discount

Entry Free | All Credit & Debit Cards Accepted
Contact - 6364165152, 9886087281
Organised by : abhivruddhi
(Registered with O/o D C (H) Ministry of Textiles, Govt. of India)